(SRI H. SIDDAVEERAPPA)

this matter before the House. The other day, we received a telegram about the Jagalur incident. The man goes to the police station to lodge a complaint they put him in the lock-up there and he is asked to pay some bribe. There is a limit to these things. I therefore request the Hon'ble Minister concerned to get this matter examined and see what truth there is in these complaints.

BUSINESS OF THE HOUSE

MR. SPEAKER.—The Hon'ble Member would kindly notice that there is a supplementary agenda relating to a resolution in connection with the Electricity Board. That also, I believe, can be dealt with along with the Supplementary Demands.

SRI N. HUTCHMASTHI GOWDA (Huliyurdurga).—Yes, Sir,

ADDITIONAL AND SUPPLEMENTARY DEMANDS FOR GRANTS FOR 1967-68 (SECOND INSTALMENT.)

SRI B. D. JATTI.—Sir, on the recommendation of the Governor, I beg to move:

> "That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1968, in respect of 'Taxes on Income other than Corporation Tax'."

MR. SPEAKER.—Motion moved:

> "That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1968, in respect of 'Taxes on Income other than Corporation Tax'."

This demand and all the other demands are deemed to have been moved and the debate will begin. I have also to inform that the recommendation of the Governor has been received for moving these Demands in this House.

SRI M. NAGAPPA.—Sir, I rise on a point of order. Sir, my point of order is that many items of the Demands won't come under article 205 of the Constitution. It says:

> "(a) if the amount authorised by any law made in accordance with the provisions of article 204 to be expended for a particular service for the current financial year is found to be

> insufficient for the purposes of that year or when a need has arisen during the current financial year for supplementary or additional expenditure upon some new service not contemplated in the annual financial statement for that year."

If the need has arisen it will be after the commencement of the budget for 1967-68. Such items have not been brought as Supplementary Demands. For instance, items No. 1, 2 and 3 of Demand No. 20. In item No. 1 it is stated: "The Court awarded an additional compensation of Rs. 2,704. As there was no provision under 'charged' section in the current year's Budget for meeting this expenditure an advance of Rs. 2,704 from the Contingency Fund was sanctioned in September 1967." This matter has been decided long ago and it ought to have been included in the budget itself. Instead it has been brought as a Suppementary Demand.

Mr. SPEAKER.—What is the relevant date ?

Sri M. NAGAPPA.—The date on which the court has given the award should be taken as the date. Now, item No. 3 is as follows :

> "Under the scheme for purchase and distribution of improved cotton seeds, the erstwhile Bombay State had entrusted the distribution work in Belgaum District to the Belgaum Co-operative Purchase and Sales Union, Belgaum. During the period of 4 years from 1946-50, the Society sustained a loss of Rs. 24,623.19 on this account. As the Government did not agree to reimburse this loss, the society filed a civil suit in the Belgaum Court which was dismissed. Then the society preferred an appeal in the Mysore High Court. The High Court in their R.F.A.No. 168 of 1962, dated 20th June 1966, agreeing to the joint memo filed by the parties passed a decree. As there was no provision under 'Charged' section in the current year's budget for meeting this expenditure, an advance of Rs. 32,615 from the Contingency Fund was sanctioned in July 1967. A Supplementary Appropriation is required to enable repayment to be made to the Fund."

Here, as per the joint memo filed, Government is a party to it, This Demand has arisen on 20th June 1966. Why did not Government make up its mind to include it in the annual budget and why has it brought this as a Supplementary Demand ?

At page 32, Demand No 48—Item No. 1 reads as follows :

> "Sanction was accorded in 1966 (renewed in August 1967) to the 'Construction of a Building for Fisheries School at Polippu' at an estimated cost of Rs. 1.25 lakhs. As the expenditure constituted an item of 'New Service' an advance of Rs. 1,00,000 was sanctioned..."

(SRI M. NAGAPPA)

As sanction has already been given in the year 1966, such an item cannot be brought as a supplementary item in the Budget. Therefore, I submit that Article 205 won't permit such a supplementary demand. This could have been brought as an item in the original Budget.

MR. SPEAKER—Presently, I have no doubt that this should be discussed. I will give the Ruling later.

† SRI H. SIDDAVEERAPPPA (Harihar).—Sir, I oppose the Supplementary Demands that have been now placed before this House. Before I say a few words about these demands, I would like to say that this Government, known for its extravagant spending, aimless spending and spending in a manner as not to safeguard the interests of the State, seem to think that they can play with the finances of the State in any manner they like without knowing that the injury or the damage they cause to the finances of the State will have to be borne by the coming generations. So far as that position is concerned, there cannot be any better document than the one they have now placed before this House. You will see that in-season and out of season the Treasury Benches have been telling us, 'the finances of the State are in a very bad plight, we have to apply strict and stringent economy measures with a view to safeguard the interests of the State'. But, curiously enough, the more they say the greater will be their demand to spend more money.

Let us take Demand No. 3 about State Excise duties. It is no doubt true that due to their policy of scrapping Prohibition and making every part or most parts of the State wet, they want additional staff. My submission is, today probably in the whole of India, if proper statistical data is collected there is no State which has such a high percentage of expenditure on the services of the State. They could have mobilised all the extra posts or additional hands available in various Departments. Now, they have grown like jungle weeds. If the Hon'ble Finance Minister has an eye to look into it, in most of the departments there are more men than there are jobs.

SRI S. D. KOTHAVALE (Sankeswar).—Can the Hon'ble member give the percentage here and elsewhere?

SRI H. SIDDAVEERAPPA.—Readily I have not got the figures. I can tell you that my friend, the Hon'ble Finance Minister is in a better position to collect the data. I have read somewhere that the expenditure here is high. Is it the opinion of the Hon'ble member that the expenditure is not high? Sometimes even the Treasury Benches say that the expenditure is high. Take for instance the Agricultural Department and the Co-operation Department. In these two departments the staff has grown to such an extent that we are really troubled. There is the Deputy Director of Agriculture, there are other officers and a large number of staff. We find in the Agriculture Department the establishment charges come to more than Rs. 8 crores per annum

Somebody once said: 'scrap your agriculture department—not a blade of grass grows less'. I am not advocating in that way that there should be no department. Take for example any new scheme. A new scheme means additional staff, more number. If really they wanted to mobilise whatever staff is now available, they could have perhaps consented to it. With all this additional expenditure have you fixed any work-load on any one of the officers? Of course, on Ministers we need not fix any work-load, because they have no work. I have seen some Ministers, who won't get a file once a month. Is there any work load anywhere in any of your Departments? I find in other countries that there is a work-load. Every man is expected to turn out so much of work before he becomes eligible to draw his salary. Here, the policy is "eat, but do not work". That way the Government has gone on developing expenditure. At some stage, an axe will have to be put to it. I take very strong exception to the very item which seems to have consumed more money—Demand No. 51—item (e). I do not know whether we have to weep or laugh at the Government in aimlessly and recklessly advancing monies to concerns. I would like to know whether they have applied their mind at all? What is all this nonsense about the way in which you have gone on providing funds? I can understand advances to cultivators. There is a point in advancing loans to cultivators on instalments to be recovered, I think, within six months. Cultivators do need funds. Take for example, loans to industrial concerns and cottage industries in the private sector. You have advanced loan to M/s. Shankara Textiles, Davangere. This is nothing short of nepotism, because I know something about these mills. Once, Sri A. Ramaswamy Mudaliar, the then Dewan of Mysore, advanced Rs. 10 lakhs to a private firm. Do you know how difficult it was to recover it? I was the Minister in charge of Industries then.

Sri S. D. KOTHAVALE.—Sir, I rise to a Point of Order. Under Rule 172, the scope of discussion on Supplementary Grants is stated. It says:

> "The debate on the supplementary grants shall be confined to the items constituting the same and no discussion may be raised on the original grants nor policy underlying them save in so far as it may be necessary to explain or illustrate the particular items under discussion."

Therefore, my submission is that the debate is very much limited. I do not know whether my Hon'ble friend is proceeding in the matter of opposing the original grants themselves and all that. I am questioning whether that is permissible under the rule. It is not permitted under the rule. Therefore, I request the debate should be confined only to the purpose. That is the point of order.

1 30 P.M.

Mr. SPEAKER.—Yes. The debate may go on.

SRI H. SIDDAVEERAPPA.—This Government goes in this manner. As I know, Rs. 10 lakhs was given as loan as far back as 1945. That loan was recovered in so many instalments. All sorts of concessions were shown. They took so many years to repay. In this industry, the interest of the labour class is not safeguarded. The policemen will be called to safeguard the interests of these people. When this is the position, how has the Government made up its mind to pay 10 lakhs of rupees? He is the close associate of the Chief Minister. With a view to help him, this amount is paid. With regard to this M. S. K. Mills Rs. 21 lakhs is to be given for rehabilitation. I do not know what kind of rehabilitation is being done in this Mill. So far nothing has been done in this Mill. When this is the position, I do not know why this Government is so liberal in lending so much of loan to this Mill. Have they got any sense in taking loans and paying? These are all borrowed capital. You get this money out of borrowed capital. You people give away this money to Mills like the Shankara Textiles and M. S. K. Mills. Yo will never realise your responsibility. Our grand children will have to bear the burden because you will go away after giving so much of money as loan out of borrowed capital. Supposing it is your money. Would you make up your mind to pay to these Mills?

Take this miscellaneous Advance to this Gowribadanur Co-operative Sugar Factory. This Factory never functioned at all. Everything is done in the interest of the poor grower. Where is the grower? The grower is still there creeping and never to come up. When such is the position, are you justified in lending loan to this Factory? Have you got any responsibility? I know it was taken and eaten away. To pay interest, where is the sugar produced in that Factory? It may be in the House of the Food Minister, I do not know. When such is the position, who asked you to pay?

There are other items like this. The important one of these is the Mandya National Paper Mills. We have had enough of it. Take it from me that any money these gentlemen have paid is only to such concerns like this which will never rise their head and which will never come up. Thees people will not add even one rupee to the national wealth. They cannot solve unemployment, or labour problems. They select only such concerns which are losing and not repaying the borrowed money. They are not bothered whether the money is collected or not. They are interested on something else. These people are going to industrialise the State on a large scale. This is how they are doing. Formerly, the Mysore State was getting an income of Rs. 8 crores per annum, Out of this amount, so many industries came up and so many things were done. It seems these people have collected Rs. 1½ lakhs as rebate. These people are culpable because most of them are time barred and of more than five years. To such people they have paid. As regards the Commission and share, out of this 1½ lakhs of rupees, I will say when proper time comes. These people do not know what is budgeting. The Reserve Bank has stated

you are bankrupt and therefore we are not going to give any money. This kind of spending in an unjudicious manner is harmful to the interest of the country. For these reasons, I oppose these supplementary demands.

† ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಮಾನ್ಯ ಸಭಾಪತಿಗಳೇ, ಈ ಸ್ಟೇಟ್‌ಮೆಂಟ್ ಆಫ್ ಡಿಮ್ಯಾಂಡ್ಸನ್ನು ಓದಿದ ತಕ್ಷಣವೇ ನಿಜವಾಗಿಯೂ ನನಗೆ ಈ ರೀತಿ ಅನೀತಿ, ದುರಾಚಾರ, ಅನ್ಯಾಯ, ದುರನೀತಿ, ದುರಾಡಳಿತ, ಕರ್ತವ್ಯಲೋಪ ಇವೇ ಈ ಸರ್ಕಾರದ ಪಂಚಶೀಲಗಳು, ಈ ಪಂಚಶೀಲದ ಮೇಲೆ ಸರ್ಕಾರ ಸ್ಥಾಪನೆ ಮಾಡಿದ್ದಾರೆ. ತಾವು ಮಾಡತಕ್ಕ ತಪ್ಪನ್ನು ಅಳಿಸಬೇಕು, ತಮ್ಮವರನ್ನು ಉಳಿಸಬೇಕು ಎಂಬ ಅಭಿಪ್ರಾಯ ಇವರಲ್ಲಿ ಚೆನ್ನಾಗಿ ಎತ್ತಿ ಕಾಣುತ್ತಾ ಇದೆ.

ಶ್ರೀಮಾನ್ ಸಿದ್ಧವೀರಪ್ಪನವರು ಕೈಗಾರಿಕೆಗಳಿಗೆ ಅಡ್ವಾನ್ಸ್ ಮಾಡಿರುವುದು ಉಚಿತವಲ್ಲ ಎಂದು ಹೇಳಿದರು, ಇವರಲ್ಲಿ ಎಷ್ಟು ಮಿಸ್‌ಚೀಫ್ ಇದೆ ಎಂಬುದನ್ನು ತಾವು ನೋಡಬೇಕು. ಶಂಕರ ಟೆಕ್ಸ್‌ಟೈಲ್ಸ್‌ಗೆ ಹತ್ತು ಲಕ್ಷ ರೂಪಾಯಿ ಕೊಟ್ಟಿದ್ದೀರಿ. 5 ಪರ್ಸೆಂಟ್ ಇಂಟರೆಸ್ಟ್ ಮತ್ತು ಎರಡೂವರೆ ಪರ್ಸೆಂಟ್ ಪೀನಲ್ ಇಂಟರೆಸ್ಟ್ ಈ ಪ್ರಕಾರ ಒಟ್ಟು ಏಳೂವರೆ ಪರ್ಸೆಂಟ್ ಹಾಕುತ್ತೇವೆ. ಎಂದು ಹೇಳುತ್ತೀರಿ, ಅದೇ ಸಹಕಾರಿ ಸಕ್ಕರೆ ಕಾರ್ಖಾನೆ ಮುಳುಗುತ್ತಾ ಇದೆ, ಲಕ್ಷಾಂತರ ರೂಪಾಯಿ ಲುಕ್ಸಾನಾಗಿದೆ, ಅದಕ್ಕೆ 5 ಪರ್ಸೆಂಟ್ ಬಡ್ಡಿ ಮತ್ತು 9 ಪರ್ಸೆಂಟ್ ಪೀನಲ್ ಇಂಟರೆಸ್ಟ್ ಹಾಕುತ್ತಾ ಇದ್ದೀರಿ, ಇದರ ಉದ್ದೇಶವೇನೋ ಅರ್ಥವಾಗುತ್ತ ಇಲ್ಲ. ಹಾಗೆ ಸರ್ಕಾರದವರು ಹಿಂದಿನ ಬಾಗಿಲಿನಿಂದ ಸಹಾಯ ಮಾಡಬೇಕೆಂದರೆ ಹತ್ತು ಲಕ್ಷ ರೂಪಾಯಿಗಳನು ಪುಗಸಟ್ಟೆ ಕೊಡುವುದೇ ಸುಖ ಅಂತ ಕಾಣುತ್ತದೆ. ಈ ರೀತಿ ಶಂಕರ ಟೆಕ್ಸ್‌ಟೈಲ್ಸ್‌ಗೂ ಮತ್ತು ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಗೂ ತಾರತಮ್ಯ ಮಾಡುವುದರ ಉದ್ದೇಶ ಏನು ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸುತ್ತಾರೆ ಎಂದು ನಂಬಿದ್ದೇನೆ. ಟೆಕ್ಸ್‌ಟೈಲ್ಸ್ ಇಂಡಸ್ಟ್ರೀನಲ್ಲಿ ನಷ್ಟವಾಗುವುದಕ್ಕೆ ಕಾರಣ ಇಷ್ಟೆ. ಸ್ಲಂಪ್ ಬಂದಿದೆ, ಸಾಕಾದಷ್ಟು ಹತ್ತಿ ಬೆಳೆಯುತ್ತಿಲ್ಲ, ಷಾರ್ಟೇಜ್ ಬಂದಿದೆ ಹೀಗೆ ಸರ್ಕಾರದವರು ಒಂದೊಂದು ಕೈಗಾರಿಕೆಗೂ 20 ಲಕ್ಷ 30 ಲಕ್ಷ ಕೊಡುತ್ತಾ ಹೋದರೆ ಕೊನೆಗೆ ಈ ಬಾಬಿನಿಂದ ಸರ್ಕಾರಕ್ಕಾಗುವ ನಷ್ಟವೆಷ್ಟು ಎಂಬುದನ್ನು ಹೇಳುವುದಕ್ಕೇ ಆಗುವುದಿಲ್ಲ. ಆ ಗುಲ್ಬರ್ಗ ಮಿಲ್ಸಿನಿಂದ ವರ್ಷಕ್ಕೆ 20 ಸಾವಿರ. 12 ಸಾವಿರ, 15 ಸಾವಿರ ಉತ್ಪತ್ತಿಯಾಗುತ್ತಿದೆಯೆಂದು ಹೇಳಿದ್ದಾರೆ. ಅದಕ್ಕೆ ನಾವು ಹಾಕಿರತಕ್ಕ ಬಂಡವಾಳ ಸುಮಾರು 2 ಕೋಟಿ ರೂಪಾಯಿಗಳಾಗಬಹುದು. ಅದಕ್ಕೆ ಎಷ್ಟು ಬಡ್ಡಿಯಾಗುತ್ತದೆ ಎಂಬುದನ್ನು ಲೆಕ್ಕ ಹಾಕಿದರೆ ಅದೇ ವರ್ಷಕ್ಕೆ 6 ಲಕ್ಷಕ್ಕೆ ಬರುತ್ತೆ. ಹೀಗಿರುವಾಗ ನಾವು ಅಲ್ಲಿ ತಿಂಗಳೊಂದಕ್ಕೆ ಅಂದಾಜ 50 ಸಾವಿರ ರೂಪಾಯಿಗಳ ಉತ್ಪನ್ನವಾದರೂ ಬಂದರೆ ಅಲ್ಲಿಗೆ ಬಡ್ಡಿಯಾದರೂ ಗಿಟ್ಟುತ್ತದೆ ಎಂದುಕೊಳ್ಳಬಹುದು. ಆದರೆ ಅಲ್ಲಿ ವರ್ಷಕ್ಕೆ ಬರತಕ್ಕ ಉತ್ಪನ್ನವೇನು ಅದಕ್ಕೆ ತಗಲುವ ವೆಚ್ಚವೇನೆಂಬುದನ್ನು ನೋಡಿದರೆ ಸರ್ಕಾರದವರ ನಡತೆಯಲ್ಲಿ ಅರ್ಥವೇ ಇಲ್ಲವೆಂಬುದು ಎದ್ದು ಕಾಣುತ್ತದೆ. ಇನ್ನಾದರೂ ಸರ್ಕಾರದವರು ಇದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು. ಈ ದಿವಸ ನಮ್ಮ ರಾಜ್ಯದಲ್ಲಿರತಕ್ಕ ಯಾವುದಾದರೂ ಕೈಗಾರಿಕೆ ಅದು ಹಾಳಾಗುತ್ತಿದೆ ಎಂದರೆ ಅದಕ್ಕೆ ಸರ್ಕಾರದವರೇ ಮೂಲ ಕಾರಣವೆಂದು ಹೇಳಬಹುದು. ಆ ಗೌರಿಬಿದನೂರು ಸಕ್ಕರೆ ಕಾರ್ಖಾನೆಯನ್ನು ಹಿಂದೆ ನಮ್ಮ ಮುಖ್ಯಮಂತ್ರಿಗಳೇ ಅದರ ಆರಂಭೋತ್ಸವವನ್ನು ನೆರವೇರಿಸಿದರು. ಅಲ್ಲಿ ಕೆಲವು ದಿನಗಳವರೆಗೆ ಸಕ್ಕರೆಯನ್ನೂ ಕೂಡ ತಯಾರು ಮಾಡಿದರು. ಆಗ ಆ ಸಕ್ಕರೆ ಕಾರ್ಖಾನೆಯವರು ನಮ್ಮ ಸರ್ಕಾರಕ್ಕೆ ತಮ್ಮ ಭಾಗದ ಷೇರ್ ಮೊಬಲಗನ್ನು ಅಂದರೆ 20 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅವರು ತಮ್ಮ ಭಾಗದ ವಸೂಲಾಗಿರತಕ್ಕ 12 ಲಕ್ಷವನ್ನೂ ಹಾಕಿ ಕೆಲಸ ಮಾಡಿ 20—30 ಲಕ್ಷ ರೂಪಾಯಿಗಳನ್ನು ದುಡಿಯುತ್ತೇವೆ ಹಣವನ್ನು ಕೊಡಿ ಎಂದು ಕೇಳಿದಾಗ ಇವರು ಕೊಡಲಿಲ್ಲ. ಆಗ ಇವರು ಏನು ಹೇಳಿದರೆಂಬುದನ್ನು ಇಲ್ಲಿ ತಮ್ಮ ಎಕ್ಸ್‌ಪ್ಲನೇಟರಿ ನೋಟಿನಲ್ಲಿ ಹೇಳಿದ್ದಾರೆ ಸರ್ಕಾರದವರು ಈ ಕಾರ್ಖಾನೆಗೆ ಒಂದೂವರೆ ಕೋಟಿಗೆ ಗ್ಯಾರಂಟಿಯನ್ನು ಕೊಟ್ಟಿರುವುದೇ ಅಲ್ಲದೆ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ಮತ್ತು ಸಿಂಡಿಕೇಟ್ ಬ್ಯಾಂಕುಗಳ ಡಿಮ್ಯಾಂಡನ್ನು ಮೀಟ್ ಮಾಡುವುದಕ್ಕಾಗಿ 30 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಹೇಳಿದರು. ಇದು ಆ ಇಬ್ಬರು ಕೊಟ್ಟಿರತಕ್ಕ ಬಂಡವಾಳಕ್ಕೆ ಬಡ್ಡಿಗೇ ಸರಿಹೋಗುತ್ತದೆ. ಅಂದಾಗ ಅವರು ಇನ್ನು ಯಾವ ಆಧಾರದ ಮೇಲೆ ಕೆಲಸವನ್ನು ನಡೆಸಬೇಕು ? ಇವರು ಅವರಿಗೆ ಆ 20 ಲಕ್ಷ ರೂಪಾಯಿಗಳ ಷೇರ್ ಬಂಡವಾಳವನ್ನು ಕೊಡುವುದು ಯಾವಾಗ ? ಅಲ್ಲಿಯವರೆಗೂ ಅವರು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳಬೇಕೆ ? ಇವರು ಷೇರ್ ಹಣವನ್ನು ಬಡ್ಡಿಗೆ ಸರಿಗಟ್ಟುತ್ತಾ ಹೋದರೆ ಅದು ಇನ್ನು ಉದ್ಧಾರವಾದಂತೆಯೇ ಆಯಿತು ! ಸರ್ಕಾರದವರು ಯಾವಾಗ ಬಂದು

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಕಾರ್ಖಾನೆಗೆ ಅದು ಪಬ್ಲಿಕ್ ಸೆಕ್ಟಾರಿನಲ್ಲಾಗಲೀ ಅಥವಾ ಪ್ರೈವೇಟ್ ಸೆಕ್ಟಾರಿನಲ್ಲಾಗಲೀ ಸ್ಥಾಪನೆ ಮಾಡುವುದಕ್ಕೆ ಉತ್ತೇಜನವನ್ನು ಕೊಟ್ಟಾಗ ಅದರ ಉತ್ಪತ್ತಿ ಒಂದು ಮಟ್ಟವನ್ನು ಮುಟ್ಟುವವರೆಗೂ ಅದಕ್ಕೆ ಅಲ್ಲಿಯತನಕ ತಗುಲುವ ವೆಚ್ಚವನ್ನು ವರ್ಷಂಪ್ರತಿ ಕೊಡುತ್ತಿರಬೇಕು ; ಇಲ್ಲವಾದರೆ ಅದು ಉಳಿಯುವುದಿಲ್ಲ. ಹಾಕಿದ ಹಣ ವೃಥಾ ಹಾಳಾಗುತ್ತದೆ. ಈ ವಿಚಾರವನ್ನು ಸರ್ಕಾರದವರು ಬಹಳ ತೀಕ್ಷ್ಣವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ನಾವು ಪದೇ ಪದೇ ಇದನ್ನು ಹೇಳುತ್ತಿದ್ದರೂ ಸರ್ಕಾರ ಅದನ್ನು ಮಾಡುತ್ತಿಲ್ಲ. ಒಂದು ಕಡೆ ಹೀಗೆ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಲುಕ್ಸಾನನ್ನು ಅನುಭವಿಸುತ್ತಿದ್ದಾಗ ಇನ್ನೊಂದು ಕಡೆ ಒಬ್ಬ ಹತ್ತಿಗಿರಣಿಯ ಮಾಲೀಕನಿಗೆ ಲುಕ್ಸಾನಾಗುತ್ತದೆ ಎಂದು ಅಲ್ಲಿಗೆ ಹೆಚ್ಚಿನ ಬಂಡವಾಳವನ್ನು ಒದಗಿಸತಕ್ಕ ಉದ್ದೇಶವಾದರೂ ಏನು ? ಆ ಸಾಹುಕಾರನಿಗೆ ಅನುಕೂಲವಾಗಲೆಂದೇ ಅಲ್ಲವೇ ? ನಮ್ಮ ರಾಜ್ಯದಲ್ಲಿನ ಕೈಗಾರಿಕೆಗಳ ವಿಚಾರ ಹೀಗಿದ್ದರೆ ಅತ್ತ ಮದ್ರಾಸಿನಲ್ಲೂ ಕೈಗಾರಿಕೆಗಳು ನಡೆಯುತ್ತಿವೆ ಅದನ್ನು ನೋಡಿದರೆ ನಮ್ಮ ಅಧಿಕಾರಿಗಳನ್ನೂ ಮತ್ತು ಈ ಕೈಗಾರಿಕೆಗಳಲ್ಲಿ ತೊಡಗಿರತಕ್ಕ ಜನರನ್ನೂ ಅಲ್ಲಿಗೆ ಟ್ರೈನಿಂಗ್‌ಗಾಗಿ ಕಳುಹಿಸಬೇಕೆಂದು ಕಾಣುತ್ತದೆ. ಒಂದು ಕಡೆ ಷೇರ್ ಮೊಬಲಗನ್ನು ಬಡ್ಡಿಗೆ ಕಟ್ಟುತ್ತಿರುವ ಕಡೆ ದುಬಾರಿ ಬಡ್ಡಿಯನ್ನು ಹಾಕಿ, ಇನ್ನೊಂದು ಕಡೆ ಒಬ್ಬ ವ್ಯಕ್ತಿಗೆ ಅನುಕೂಲವಾಗತಕ್ಕ ಕಡೆ ಕಡಿಮೆ ಬಡ್ಡಿಗೆ ಸರ್ಕಾರದವರು ಹಣವನ್ನು ಕೊಡತಕ್ಕದು ಸರಿಯಾದದ್ದಲ್ಲ. ದೇಶಾಡಳಿತದ ಜವಾಬ್ದಾರಿಯನ್ನು ಹೊತ್ತಿರುವ ಸರ್ಕಾರ ಹಣಕಾಸಿನ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ವರ್ತಿಸಬೇಕಾದ್ದು ಅತ್ಯಗತ್ಯ. ಹೀಗೆ ಸರ್ಕಾರದವರು ಒಂದು ಕಡೆ ಶೇಕಡ 5ರಂತೆ ಬಡ್ಡಿ ಮತ್ತು ಎರಡೂವರೆ ಪರ್ಸೆಂಟಿನ ಪ್ರಕಾರ ಪೀನಲ್ ಇಂಟರೆಸ್ಟ್ ಹಾಕಿ ಮತ್ತೊಂದು ಕಾರ್ಖಾನೆಗೆ ಶೇಕಡ 5ರಂತೆ ಬಡ್ಡಿ ಮತ್ತು ಶೇಕಡ 4 ರಂತೆ ಪೀನಲ್ ಇಂಟ್ರೆಸ್ಟ್ ಹಾಕಿದ್ದಾರೆ. ಇದರ ಮರ್ಮ ಗೊತ್ತಾಗುವುದಿಲ್ಲ. ಆ ಕಡಿಮೆ ಬಡ್ಡಿಯವರು ಮಂತ್ರಿಗಳ ಆಪ್ತರೋ ಅಥವಾ ಅವರಿಂದ ಕಾಂಗ್ರೆಸ್ ಫಂಡಿಗೇನಾದರೂ ದುಡ್ಡು ತೆಗೆದುಕೊಂಡು ಹೀಗೆ ಮಾಡಿದ್ದಾರೋ ಅದನ್ನು ಮಂತ್ರಿಗಳು ವಿವರವಾಗಿ ತಿಳಿಸಬೇಕು.

ಇನ್ನು ಎಕ್ಸೈಜ್ ಬಾಬಿನಲ್ಲಿ 30 ಲಕ್ಷ ರೂಪಾಯಿಗಳನ್ನು ಹೊಸದಾಗಿ ಕೇಳಿದ್ದಾರೆ. ದೇಶದಲ್ಲಿದ್ದ ಈಚಲು ವನವೆಲ್ಲಾ ಹಾಳಾಗಿದೆ. ಆಂಧ್ರದೇಶದವರಿಗೆ ನಾವು ಈ ಬಾಬಿಗೆ 60 ಸಾವಿರ ರೂಪಾಯಿಗಳನ್ನು ತೆರಬೇಕಾಗಿದೆ. ನಮ್ಮ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಅನೇಕರು ಈಚಲು ಮರಗಳನ್ನು ಕಡಿದುಹಾಕುತ್ತಿದ್ದಾರೆ. ಯಾರೊಬ್ಬರಮೇಲೂ ಕೇಸನ್ನು ಹಾಕಿದ್ದು ನಾನು ಕಂಡಿಲ್ಲ. ಇಲ್ಲಿ ಈಚಲು ವನಗಳಿಲ್ಲದ ಭೂಮಿಯನ್ನು ಸಾಗುವಳಿಗಾದರೂ ಬಿಟ್ಟುಕೊಡಿ ಎಂದರೆ ಅದನ್ನೂ ಮಾಡುವುದಿಲ್ಲ. ಇತ್ತ ಇಲ್ಲಿ ಖಾಲಿ ಬಿದ್ದಿರತಕ್ಕ ಜಮೀನು ಸಾಗುವಳಿಯಿಲ್ಲದೆ ಹಾಳಾಗುತ್ತಿದ್ದರೆ ಅತ್ತ ನಾವು ಆಂಧ್ರಕ್ಕೆ ಹಣವನ್ನು ತೆರಬೇಕಾಗಿದೆ. ಇಲ್ಲಿ ಹೊರಗಡೆ ಹೋಗತಕ್ಕ ಹಣವನ್ನಾದರೂ ತಡೆಯಬೇಕು, ಇಲ್ಲವೆ ಇಲ್ಲಿ ಪಾಳುಬಿದ್ದಿರತಕ್ಕ ಭೂಮಿಯನ್ನಾದರೂ ಸಾಗುವಳಿಗೆ ಬಿಟ್ಟು ಕೊಡಬೇಕು. ಇದನ್ನು ಮಾಡದೆ ಸರ್ಕಾರ ತನ್ನ ಕರ್ತವ್ಯದಲ್ಲಿ ಲೋಪವನ್ನು ಮಾಡಿದೆ ಎಂದರೆ ತಪ್ಪಾಗಲಾರದು. ಇಲ್ಲಿ ಮಂತ್ರಿಮಂಡಲದಲ್ಲಿರತಕ್ಕ ವ್ಯಕ್ತಿಗಳು ಏನೋ ಇದ್ದಷ್ಟು ದಿವಸ ಕಥೆ ಹಾಕಿ ಅಲ್ಲಿ ಇಲ್ಲಿ ಹೂವಿನ ಹಾರಗಳನ್ನು ಹಾಕಿಸಿಕೊಂಡು ಅಖ್ಬಾರಿನಲ್ಲಿ ನಾನು ಕೂಡ ಒಬ್ಬ ಎಕ್ಸ್‌ಮಿನಿಸ್ಟರ್ ಎಂತ ಹೇಳಿಸಿಕೊಳ್ಳುವುದಕ್ಕೆ ಎಷ್ಟು ಬೇಕೊ ಅಷ್ಟಕ್ಕೆ ಮಾತ್ರ ಇವರು ಲಾಯಕ್ಕಾಗಿದ್ದಾರೆ.

ಇನ್ನು ಸರ್ಕಾರದವರು ಮಿತವ್ಯಯ ಮಾಡುತ್ತೇವೆಂದು ಹೇಳಿಕೆಗಳನ್ನು ಕೊಡುತ್ತಾ ಇಂಜಿನಿಯರಿಂಗ್ ಇಲಾಖೆಯಲ್ಲಿ ಒಬ್ಬ ಚೀಫ್ ಇಂಜಿನಿಯರು ಇದ್ದ ಜಾಗದಲ್ಲಿ ಈ ದಿವಸ 8 ಜನ ಚೀಫ್ ಇಂಜಿನಿಯರುಗಳಿದ್ದಾರೆ. ಮೊದಲು ಒಬ್ಬರಿದ್ದದ್ದು ಇಬ್ಬರಾಯಿತು, ಆದಾದಮೇಲೆ 6 ಜನರಾದರು. ಈಗ 8 ಜನ ಚೀಫ್ ಇಂಜಿನಿಯರುಗಳಿದ್ದಾರೆ. ಹಿಂದೆ ಪ್ರಾರಂಭಮಾಡಿ ಮುಗಿಸದೆ ಅರ್ಧಮರ್ಧ ಆಗಿರತಕ್ಕ ಕೆಲಸಗಳೂ ಹಾಗೆ ಎಷ್ಟೋ ಉಳಿದಿವೆ. ಹೊಸ ಕೆಲಸಗಳನ್ನು ತೆಗೆದುಕೊಳ್ಳಲು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಉಳಿದಿರತಕ್ಕ ಕೆಲಸಗಳನ್ನು ಮುಗಿಸುವುದಕ್ಕೇ ಇನ್ನೂ 558 ಕೋಟಿ ರೂಪಾಯಿಗಳು ಬೇಕೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಈ ಚೀಫ್ ಇಂಜಿನಿಯರುಗಳನ್ನು ಏಕೆ ಹೆಚ್ಚಿಸುತ್ತಿದ್ದಾರೋ ಅದರ ಮರ್ಮ ತಿಳಿಯದಾಗಿದೆ. ಉದ್ಯೋಗ ಇದ್ದರೆ ಅಧಿಕಾರಿಗಳನ್ನು ನೇಮಕ ಮಾಡಲಿ ಬೇಡವೆನ್ನುವುದಿಲ್ಲ. ಉದ್ಯೋಗವಿಲ್ಲದ್ದಾಗಲೂ ಏಕೆ 10-15 ಜನ ಚೀಫ್ ಇಂಜಿನಿಯರುಗಳನ್ನು ನೇಮಕ ಮಾಡಿದ್ದಾರೆ? ಇವರಿಗೆ ನಾಚಿಕೆ ಆಗುವುದಿಲ್ಲವೆ? ಯಾವ ಡೆವಲಪ್‌ಮೆಂಟ್ ಬಾಬಿನಲ್ಲಿ ನೋಡಿದರೂ ಅಲ್ಲಿ ಹಣವಿಲ್ಲ. ಹೊಸ ಕೆಲಸಕ್ಕೆ ದುಡ್ಡಿಲ್ಲ. ಆದರೆ ಇವರು ತಮಗೆ ಬೇಕಾದವರಿಗೆ ದೊಡ್ಡ ದೊಡ್ಡ ಹುದ್ದೆಗಳನ್ನು ಕೊಡಲು ಕೋಟ್ಯಾಂತರ

ರೂಪಾಯಿಗಳನ್ನು ಹಾಳುಮಾಡುತ್ತಿದ್ದಾರೆ. ಇದನ್ನು ನೋಡಿದರೆ ಕೋತಿ ಮೊಸರನ್ನವನ್ನು ತಿಂದು ಮೇಕೆ ಬಾಯಿಗೆ ಒರೆಸಿದ ಹಾಗೆ ಕಾಣುತ್ತಿದೆ. ಇದು ಒಂದು ದಬ್ಬಾಳಿಕೆ ಆಡಳಿತವೆಂದರೆ ಅದು ತಪ್ಪಾಗಲಾರದು. ನಾವು ಇತ್ತ ಕಡೆ ಸಾಮಾನ್ಯ ನೌಕರರಿಗೆ ದಿನದಿನಕ್ಕೂ ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್ ಜಾಸ್ತಿಯಾಗುತ್ತಿದೆ ಎನ್ನುತ್ತಿರುವಾಗ ಮತ್ತೊಂದು ಕಡೆ ದೊಡ್ಡ ದೊಡ್ಡ ಹುದ್ದೆಗಳನ್ನು ಏರಿಸುತ್ತಿದ್ದಾರೆ. ಅದೇ ರೀತಿ ಇನ್ನು ಇನ್‌ಕಂಟ್ಯಾಕ್ಸ್ ಬಾಬಿನಲ್ಲೂ ಅ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್‌ದಾಬಿನಲ್ಲಿ ಇರತಕ್ಕ ಜನರಿಗೆ ಸಾಕಷ್ಟು ಕೆಲಸವಿಲ್ಲದಿರುವಾಗ ಅಲ್ಲಿ ಹೊಸದಾಗಿ ಇನ್‌ಕಂಟ್ಯಾಕ್ಸ್ ಡೆಪ್ಯುಟಿಕಮಿಷನರನ್ನು ನೇಮಕ ಮಾಡುತ್ತಿದ್ದಾರೆ. ಇಂಥಾ ವಿಷಯಗಳನ್ನು ವಿಚಾರಣೆ ಮಾಡತಕ್ಕ ಜವಾಬ್ದಾರಿಯುಳ್ಳ ಜನರಾರೂ ಸರ್ಕಾರದಲ್ಲಿದ್ದ ಹಾಗೆ ಕಾಣುವುದಿಲ್ಲ. ಯಾವ ಇಲಾಖೆಯಲ್ಲೂ ನೌಕರರು ಸರಿಯಾಗಿ ಕೆಲಸಮಾಡುತ್ತಿಲ್ಲ. ಇದನ್ನೇನೂ ಒಳಹೊಕ್ಕು ನೋಡದೆ ಮಂತ್ರಿಗಳಾಗಿರತಕ್ಕ ಜನರು ಬರಿ ಪ್ರಾರಂಭೋತ್ಸವ ಇಲ್ಲವೆ ಭಾಷಣಕ್ಕಾಗಿ ಅಲ್ಲಿ ಇಲ್ಲಿ ಹಾರಾಡುತ್ತಿದ್ದಾರೆ. ಇದು ಮಂತ್ರಿಮಂಡಲದವರು ಮಾಡತಕ್ಕ ಕರ್ತವ್ಯವೇ? ಈ ಎಲ್ಲ ಕಾರಣಗಳಿಂದ ನಾನು ಈ ಸಪ್ಲಿಮೆಂಟರಿ ಗ್ರ್ಯಾಂಟನ್ನು ಒಪ್ಪುವುದಿಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಭೂಸುಧಾರಣೆಯನ್ನು ತರುತ್ತೇವೆ ಎಂದು ಹೇಳಿ ಸರಕಾರದವರು ಕಳೆದ ಇಪ್ಪತ್ತು ವರ್ಷಗಳಿಂದಲೂ ಹೇಳುತ್ತಲೇ ಬಂದಿದ್ದಾರೆ. ಆದರೆ ಕಾರ್ಯತಃ ಏನನ್ನೂ ಸರಕಾರದವರು ಮಾಡಲಿಲ್ಲ ಎನ್ನುವ ವಿಷಯವನ್ನು ವಿಷಾದದಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಮುನಿಸೀಫರುಗಳು ಈ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೈಕೋರ್ಟಿನವರು ಹೇಳಿದ ಮೇಲೆ ಇವರು ಮಾಡಬೇಕು. ಇದರಲ್ಲೇನಿದೆ ಎಂದರೆ: Demand 11: It was pointed out by the High Court of Mysore that the work relating to the Land Reforms Act is so much that the Munsiffs cannot attend to the same in addition to their normal work. ಹೈ ಕೋರ್ಟು ಹೇಳಬೇಕು ಈ ಸರಕಾರದವರಿಗೆ. ಆದುದರಿಂದ ಇದು ಎಂಥಹ ಸರಕಾರ ಎನ್ನುವುದನ್ನು ಯಾವ ಶಬ್ದ ಉಪಯೋಗಿಸಿ ಇಲ್ಲಿ ಹೇಳಬೇಕೋ ಅದನ್ನು ಹೇಳುವುದಕ್ಕೆ ಇಲ್ಲಿ ಇಷ್ಟಪಡುವುದಿಲ್ಲ. ಏಕೆಂದರೆ ನಾನು ಹೇಳುವ ಶಬ್ದಗಳು ಅಷ್ಟು ತೀವ್ರವಾಗಿ ಕಾಣಬಹುದು; ಅದರಿಂದ ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಕೊಪ್ಪ, ಶೃಂಗೇರಿ, ತೀರ್ಥಹಳ್ಳಿ, ಹೊಸನಗರ, ಶಿಕಾರಿಪುರ, ಸೊರಬ, ಶ್ರೀರಂಗಪಟ್ಟಣ ಇತ್ಯಾದಿ ಮಲೆನಾಡಿನ ಹಾಗೂ ಇನ್ನಿತರ ತಾಲ್ಲೂಕುಗಳಲ್ಲಿ ಗೇಣಿಗೆ ಸಂಬಂಧಪಟ್ಟ ಅಪೀಲುಗಳು ನೂರಾರು ಏತಕ್ಕೆ, ಸಾವಿರಾರು ಗೇಣಿ ವಿವಾದಗಳು ಇತ್ಯರ್ಥವಾಗದೇ ತಹಶೀಲುದಾರರುಗಳ ಕೋರ್ಟಿನಲ್ಲಿ ಬಿದ್ದು ಸುಮಾರು 2, 3, 4, 5, 6 ಹಾಗೂ 7 ವರ್ಷಗಳಿಂದಲೂ ಒಂದೇ ಸಮನೆ ಕೋರ್ಟಿಗೆ ಬರುವುದು ಕಷ್ಟವಾಗಿದ್ದರೂ ಕೂಡ ಗೇಣಿದಾರರು ಹಾಗೂ ಜಮೀನುದಾರರು ಕೋರ್ಟುಗಳಿಗೆ ಹೋಗಿ ಲಾಯರುಗಳಿಗೆ ಫೀಸುಗಳನ್ನು ಕೊಟ್ಟು ಹತವಾಗಿದ್ದಾರೆ. ಅದರಲ್ಲೂ ಎಷ್ಟೋ ಕಡೆಗಳಲ್ಲಿ ಲಾಯರುಗಳಿಗೆ ದುಡ್ಡು ತೆತ್ತು ಭಿಕಾರಿಗಳಾಗಿಯೂ ಆಗಿ ಮನೆ ಮಠಗಳನ್ನೂ ಇದಕ್ಕಾಗಿ ಕಳೆದುಕೊಂಡಿದ್ದಾರೆ. ಮೊದಲಿಗೆ ಈ ಕೇಸುಗಳನ್ನು ಇತ್ಯರ್ಥ ಮಾಡಲು ಡೆಪ್ಯುಟಿ ತಹಶೀಲುದಾರರುಗಳು ಎಂದಿದ್ದರು. ಈಗ ಅವರುಗಳು ಇಲ್ಲ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದು ಕಾಂಗ್ರೆಸ್ಸಿನವರು ಒಪ್ಪಿದಂತಹ ತತ್ವ ಎಂದರೆ, 'ಉಳುವವನಿಗೆ ನೆಲ ಕೊಡುವುದು' ಎಂದರೆ 'ಲ್ಯಾಂಡ್ ಟು ದಿ ಟಿಲ್ಲರ್' ಎನ್ನುವ ಒಂದು ನಿರ್ಣಯದಂತೆ ಒಂದು ದೃಢವಾದ ತೀರ್ಮಾನವನ್ನೂ ಮಾಡಿದ್ದೇವೆ ಎಂದು ಮೇಲಿಂದ ಮೇಲೆ ಹೇಳುತ್ತಲೇ ಬರುತ್ತಿದ್ದಾರೆ. ಆದರೆ ಯಾವ ರೈತರಿಗೂ ಇದರ ಪ್ರಯೋಜನವಾಗುವಂತೆ ಮಾಡಲಿಲ್ಲ. ಸರಕಾರದವರೇನೋ ಭೂಸುಧಾರಣೆ ಜಾರಿಗೆ ತರುತ್ತೇವೆ, ಇದರಿಂದ ಬಡ ರೈತರಿಗೆ ಉಪಕಾರವಾಗುತ್ತದೆ ಎಂದು ಬಾಯಲ್ಲಿ ಹೇಳುತ್ತಾರೆಯೇ ವಿನಾ ಕಾರ್ಯತಃ ಏನನ್ನೂ ಮಾಡುತ್ತಿಲ್ಲ. ಇದರ ಬಗ್ಗೆ ಬೇಕಾದಷ್ಟು ಚರ್ಚೆ ಕೇಂದ್ರ ಸರಕಾರದಲ್ಲಿ ಹಾಗೂ ರಾಜ್ಯ ಸರಕಾರಗಳಲ್ಲಿ ನಡೆದವು ಮತ್ತು ಎಲ್ಲ ಜವಾಬುದಾರಿಗಳನ್ನು ಪಾರ್ಲಿಮೆಂಟಿನವರೇ ಹಿಡಿದುಕೊಳ್ಳದೇ ಆಯಾ ರಾಜ್ಯ ಸರಕಾರಗಳಿಗೇ ಇದರ ಜವಾಬ್ದಾರಿಗಳನ್ನು ಬಿಟ್ಟಿದೆ ಎಂದೂ ಹೇಳಿದರು. ಇದರಿಂದಾಗಿ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಾಗಿ ಸೀಲಿಂಗ್ ಇರಬೇಕು ಎಂದು ನಿಗದಿ ಮಾಡಿದ್ದಾರೆ. ಇದಕ್ಕಾಗಿ ಬೇರೆ ಬೇರೆಯಾದ ಕಾನೂನುಗಳನ್ನು ಮಾಡಿದರು. ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಬಹಳವಾಗಿ ಮಾಡುತ್ತೇವೆ ಎಂದು ಹೇಳುತ್ತಾರೆಯೇ ಹೊರತು ಏನನ್ನೂ ಮಾಡಲಿಲ್ಲ ಎನ್ನುವುದನ್ನು ನೋಡಿದರೆ ಈ ಭೂಸುಧಾರಣೆಯ ಬಗ್ಗೆ ಅವರು ಉಪೇಕ್ಷೆ ತೋರಿಸಿ ಏನೂ ಕೆಲಸವಾಗದಂತೆ ಮಾಡುತ್ತಿರುವ ಈ ಭ್ರಷ್ಟ ಸರಕಾರ ಎಂದರೆ ಈ ಮೈಸೂರು ಸರಕಾರ. ಇಂತಹ ಒಂದು ಕಾನೂನು ಮಾಡುತ್ತೇವೆ ಎಂದು

(ಶ್ರೀ ಎಸ್. ಗೋಪಾಲಗೌಡ)

ಮೊದಲನೆ, ಎರಡನೇ ಹಾಗೂ ಮೂರನೆ ಯೋಜನೆಗಳನ್ನು ಮಾಡಿದರೂ ಕೂಡ ಏನೂ ಆಗಲಿಲ್ಲ. ಇದಕ್ಕಾಗಿ ಬೇಕಾದಷ್ಟು ವಿವರಗಳನ್ನು ಸಂಗ್ರಹಿಸಿದರು, ಇದಕ್ಕಾಗಿ ಜತ್ತಿಯವರ ಕಮಿಟಿ ಎಂದು ಮಾಡಿ ಅವರ ವರದಿಯಾಯಿತು. ಅವರ ರಿಪೋರ್ಟು ಬಂದಮೇಲೆ ರಾಜ್ಯ ಸರಕಾರ ಈ ಭೂಸುಧಾರಣೆ ವಿಷಯದಲ್ಲಿ ಕಾರ್ಯಗತ ಮಾಡುತ್ತೇವೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ನಾನು ಈಗ ಏನು ಹೇಳುತ್ತೇನೆ ಎಂದರೆ, ಗೇಣೀದಾರರ ಪರವಾಗಿ ಹೇಳುವುದು, ಇಪ್ಪತ್ತು ವರ್ಷಗಳಿಂದಲೂ ಗೇಣೀದಾರರನ್ನು ಕಾಪಾಡಿಕೊಂಡು ಬರುತ್ತೇವೆ ಎಂದು ಹೇಳುತ್ತಲೇ ಬರುತ್ತಿದ್ದೀರಿ, 1947 ರಲ್ಲೇ ಮೊರಾರ್ಜಿ ಕಮಿಟಿಯಂತೆ ಗೇಣಿ ಕಾನೂನು ಒಂದಾಗಿತ್ತು. ಅದರಂತೆ ಒಪ್ಪಿದ್ದರೆ ಈ ಭೂಸುಧಾರಣೆಯನ್ನು ಜಾರಿಗೆ ತರಬಹುದಾಗಿತ್ತು. ಆದರೆ ಆಗ ಭೂಸುಧಾರಣೆ ಮಾಡಲಿಲ್ಲ. ಹೀಗೆ 1947 ರಿಂದ 1967 ರವರೆಗೆ ಸುಮಾರು ಇಪ್ಪತ್ತು ವರ್ಷಗಳಿಂದಲೂ ಇದನ್ನು ಮುಂದೂಡುತ್ತಾ ವಿಧಾನ ಮಾಡುತ್ತಲೇ ಬಂದಿದ್ದಾರೆ. ತಮಗೆ ಬೇಕಾದ ಸಿಬ್ಬಂದಿ ಇದ್ದೇ ಇದೆ, ಸರ್ವೆ ಕೆಲಸಕ್ಕೆ ಹೇಗೆ ಸರ್ವೆ ಮಾಡುತ್ತೀರೋ ಹಾಗೆ ಎಲ್ಲ ಹಳ್ಳಿಗಳಲ್ಲಿಯೂ ಇರತಕ್ಕ ರಿಕಾರ್ಡುಗಳ ಆಧಾರದ ಮೇಲೆಯೇ ರೈತರಿಗೆ ಖಾತೆ ಹಾಕಿಸಿ ಕೊಡುವುದು ಮಾತ್ರವಲ್ಲ, ಮಿನಿಮಾಂ ಪ್ರಿಮಿಯಂ ಇಂತಿಷ್ಟು ಎಂದು ಗೇಣಿದಾರರಿಗೆ ಕೊಡಬೇಕು ಎಂದು ಹೇಳಿದರೆ ಅದು ಕ್ರಮಬದ್ಧವಾಗುವುದಿಲ್ಲ. ಆದುದರಿಂದ ನಾನು ಇಲ್ಲಿ ಕೊನೆಯದಾಗಿ ಒಂದು ಮಾತನ್ನು ಒತ್ತಾಯದಿಂದ ಹೇಳುತ್ತಿದ್ದೇನೆ. ಭೂಸುಧಾರಣೆಯನ್ನು ಸುಮಾರು ಇಪ್ಪತ್ತು ವರ್ಷಗಳಿಂದಲೂ ಜಾರಿಗೆ ತರುವುದಕ್ಕೆ ಆಗದೇ ಇರುವುದರಿಂದ ಸರಿಯಾದ ವ್ಯವಸ್ಥೆ ಮಾಡದೇ ಇರುವುದರಿಂದ ಎಷ್ಟೋ ಕಡೆಗಳಲ್ಲಿ ವಕೀಲರುಗಳಿಗೆ ಹೆಚ್ಚು ಫೀಸುಗಳನ್ನು ಕೊಟ್ಟು ಜಮೀನುದಾರರುಗಳು ಅವರವರ ಜಮೀನನ್ನು ಬಿಡಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ರಿಸಂಪ್‌ಷನ್ ಕೇಸುಗಳು ದಿನೇ ದಿನೇ ಹೆಚ್ಚುತ್ತಿವೆ. ಎಷ್ಟೋ ಕಡೆಗಳಲ್ಲಿ ಭೂಮಿಗಳನ್ನೂ ಬಿಡಿಸುತ್ತಿದ್ದಾರೆ. ಆದುದರಿಂದ ತಾವು ಗೇಣಿದಾರರಿಗೆ ಏನು ಭೂಮಿ ಕೊಡುತ್ತೇವೆಂದು ಹೇಳುತ್ತಿದ್ದೀರಿ ಅದರಂತೆ ಏನೂ ಆಗಲಿಲ್ಲ. ಇದನ್ನು ಬೇಗ ಸರಕಾರ ಕಾರ್ಯಗತಮಾಡಬೇಕು ಇಲ್ಲದಿದ್ದರೆ ಗೇಣಿದಾರರುಗಳಾಗಿರುವವರು 1968ನೇ ಇಸವಿಯಲ್ಲಿ ನಾವು ಇನ್ನು ಮುಂದೆ ಯಾರಿಗೂ ಗೇಣಿ ಕೊಡುವುದಿಲ್ಲ, ಪ್ರಿಮಿಯಂ ಕೊಡುವುದಕ್ಕೆ ಆಗುವುದಿಲ್ಲ ನೀವು ಭೂಕಂದಾಯವನ್ನು ವಸೂಲಿ ಮಾಡುವಂತೆ ಮಾಡಿದರೆ ಅದನ್ನು ಕೊಡುವುದಕ್ಕೆ ಆಗುವುದಿಲ್ಲ ಮತ್ತು ನಿಮ್ಮ ಕಾನೂನಿಂದ ಹಾಗೂ ನಿಮ್ಮ ಆಜ್ಞೆಗಳಿಂದ ಏನೂ ಆಗುವುದಿಲ್ಲ ಎಂದು ಹೇಳುತ್ತಲೇ ಗೇಣೀದಾರರು ಬರುತ್ತಿದ್ದಾರೆ. ಇದರಿಂದ ಅವರೇ ಮುಂದೆ ಸ್ವತಂತ್ರ ಅಧಿಕಾರಿಗಳಾಗಿ ವರ್ತನೆ ಮಾಡುತ್ತಾರೆ. ಈ ಒಂದು ಭಾವನೆ ಎಲ್ಲರಲ್ಲಿಯೂ ಈಚೆಗೆ ಬರುತ್ತಿದೆ. ಇದನ್ನು ತಾವು ನಾನು ಸರಕಾರಕ್ಕೆ ಕೊಡುವ ನೋಟೀಸು ಎಂದು ಬೇಕಾದರೂ ಪರಿಗಣನೆಗೆ ಸರಕಾರದವರು ತೆಗೆದುಕೊಳ್ಳಬಹುದು.

ಸ್ವಾಮಿ, ರಾಜಭವನದ ಬಗ್ಗೆ ಹಿಂದೆ ಈ ಊರಿನಲ್ಲಿರುವ ಬೆಂಗಳೂರು ಪ್ಯಾಲೇಸನ್ನು ಸುಮಾರು ನಾಲ್ಕು ಕೋಟಿಯಷ್ಟು ಬೆಲೆಗೆ ಕೊಂಡುಕೊಳ್ಳಬೇಕೆಂದು ರಾಜ್ಯಸರಕಾರದಲ್ಲಿತ್ತು. ಈಚೆಗೆ ಆ ಯೋಚನೆಯನ್ನು ಬಿಟ್ಟಿದ್ದಾರೆ ಎಂದು ಗೊತ್ತಾಯಿತು. ಆ ನಂತರ ಈಗ ಇರುವ ರೆಸಿಡೆನ್ಸಿ ರಾಜಭವನವನ್ನು ಇನ್ನೂ ಚೆನ್ನಾಗಿ ರಿಪೇರಿ ಮಾಡಬೇಕು ಎಂದು ಇದುವರೆಗೆ ಎಷ್ಟು ಹಣ ಕೊಟ್ಟರೋ ಅದು ಸಾಲದು ಎಂದು ಪುನಃ ಇಲ್ಲಿ ಕೇಳುತ್ತಿದ್ದಾರೆ. ಇಂತಹ ವ್ಯವಹಾರಗಳನ್ನು ಮಾಡುವುದು ಬಿಡಬೇಕು ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಇಲ್ಲಿರುವ ಡಿಮ್ಯಾಂಡು 10ರಲ್ಲಿ ಪುನಃ ಫರ್ನಿಚರುಗಳು ಹಾಳಾಗಿವೆ ಎಂದು ಏನೇನೋ ಹೇಳಿ ಸುಮಾರು ಎರಡು ಲಕ್ಷರೂಪಾಯಿಗಳು ಬೇಕೆಂದು ಅದಕ್ಕೆ ಒಪ್ಪಿಗೆ ಕೇಳುತ್ತಿದ್ದಾರೆ. ಇದೇನು ಸರಕಾರ ಉಳಿತಾಯ ಮಾಡುವ ನೀತಿಯೋ ಇದು ? ಇದು ಕಾಂಗ್ರೆಸ್ಸಿನವರ ನೀತಿಯೇ ? ಇಷ್ಟು ಹಣವನ್ನು ಖರ್ಚು ಮಾಡಿ ಇನ್ನೆಂತಹ ಅರಮನೆಯನ್ನು ಕಟ್ಟಬೇಕು ಎಂದಿದ್ದೀರಿ ! ಇದೇನು ಯಾವ ರೀತಿಯ ಭೋಗದ ಕಲ್ಪನೆ ಮಾಡುತ್ತಿದ್ದೀರಿ ? ಯಾವ ಕಲ್ಪನೆ ಮಾಡುತ್ತಿದ್ದೀರಿ ಇನ್ನೂ ಯಾವ ಯಾವ ಭೋಗಗಳ ಕಲ್ಪನೆ ಮಾಡಬೇಕೆಂದು ಇದ್ದೀರಿ ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಹಿಂದೆ ಸರ್ ಮಿರ್ಜಾರವರು ಈ ಭವನಕ್ಕೆ ಕಾರ್ಪೆಟ್ಟುಗಳನ್ನು ಹಾಕಿರುವುದು ಸರಿಯಾಗಿಲ್ಲ ಎಂದು ಇಲ್ಲಿ ಯಾವುದೋ ಕಾಂಗ್ರೆಸ್ಸಿನ ಕಂಪೆನಿಯವರು ಕೊಡುತ್ತಾರೆ ಅವರಿಗೆ ಸಹಾಯ ಮಾಡುವುದಕ್ಕೋಸ್ಕರವೋ ಏನೋ, ಇಲ್ಲವೇ ಯಾವುದೋ ಕಾಯಿರ್ ಹಾಗೂ ಮ್ಯಾಟ್‌ಗಳನ್ನು ಮತ್ತು ಕಾರ್ಪೆಟ್‌ಗಳನ್ನು ಈ ವರ್ಷ ತೆಗೆದುಕೊಳ್ಳಬೇಕಾಯಿತು ಎಂದು ಹೇಳಿದರೆ ಇದು ಸರಕಾರದ ಹಣದಿಂದ ಮಾಡುವಂತಹುದಲ್ಲ. ಇದನ್ನು ಸರ್ಕಾರದ ಖರ್ಚಿನಲ್ಲಿ ವೆಚ್ಚ ಮಾಡಬಾರದು. ಯಾವ ಹಾಸಿಗೆ ಮೇಲೆ ಗೌರ್ನರ್ ಮಲಗ

ಬೇಕು, ಯಾವ ಸೋಫಾದ ಮೇಲೆ ಅವರು ಕುಳಿತುಕೊಳ್ಳಬೇಕು, ನಿರ್ಧರಿಸಿ ಅದನ್ನೆಲ್ಲಾ ಒದಗಿಸ ಬೇಕಾದರೆ ಏನಾದರೂ ನಿಮ್ಮ ಪಿತೃ ಪಿತಾಮಹರು ಆಸ್ತಿಪಾಸ್ತಿ ಇಟ್ಟಿದ್ದರೆ ಅದರಲ್ಲಿ ಪ್ರಯೋಗ ಮಾಡಿ. ಒಂದು ಕೆರೆ ಕಟ್ಟುವುದಕ್ಕಾಗಿ 10 ಸಾವಿರ ರೂಪಾಯಿ ಖರ್ಚುಮಾಡುವುದಕ್ಕೆ ಯೋಗ್ಯತೆ ಇಲ್ಲ. ಪ್ರಾಥಮಿಕ ಶಾಲೆ ಕಟ್ಟಿಸಲು ಕಟ್ಟಡಕ್ಕೆ ದುಡ್ಡು ಇಲ್ಲ, ರಸ್ತೆಗಳನ್ನು ಮಾಡಿಸುವುದಕ್ಕೆ ದುಡ್ಡು ಇಲ್ಲ. ಈ ರೀತಿ ಗೌರ್ನರ್‌ಗಾಗಿ 2 ಲಕ್ಷ, 5 ಲಕ್ಷ, 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡು ವುದು ಎಂದರೇನು ? ಯಾವ ಮಹಾ ದೇವೇಂದ್ರಲೋಕದವರು ನೀವೆಲ್ಲಾ ? ಯಾವ ಸಂಪತ್ತಿಗೆ ಮೇಲೆ ಇದ್ದೀರಿ ನೀವು. ಸರ್ಕಾರದ ಬೊಕ್ಕಸಕ್ಕೆ ವಂಚನೆ ಮಾಡುತ್ತಾ ಇರುವುದನ್ನು ನೋಡಿದರೆ ಜನರಿಗೆ ಹಾಕಿಕೊಳ್ಳುವುದಕ್ಕೆ ಬಟ್ಟೆ ಇಲ್ಲ, ಬೆತ್ತಲೆ ತಿರುಗುತ್ತಿದ್ದಾರೆ ಇದನ್ನು ಸಾರ್ವಜನಿಕರೂ, ಶಾಸಕರೂ ವಿಚಾರ ಮಾಡಬೇಕು ಎಂದು ಸಂದರ್ಭದಲ್ಲಿ ಹೇಳುತ್ತೇನೆ.

2-00 P.M.

ಗುಲ್ಬರ್ಗದಲ್ಲಿ ಕೊಲೆ ಪ್ರಕರಣಗಳು ಇವೆಯೆಂದು ಹೇಳಿ ಒಂದು ರೇಂಜ್ ಆಫೀಸ್ ಹೊಸದಾಗಿ ಮಾಡಿದ್ದೀರಿ. ಇದಕ್ಕೆ 1 ಲಕ್ಷ 90 ಸಾವಿರ ರೂಪಾಯಿ ಖರ್ಚು ಮಾಡಿದ್ದೀರಿ. ಮೇಜರ್ ಹೆಡ್‌ನಲ್ಲಿ ಸೇವಿಂಗ್ಸ್ ಆಗುತ್ತೆ ಆದರಿಂದ ಇದಕ್ಕೆ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ಮೇಜರ್ ಹೆಡ್ ನಲ್ಲಿ ಹೇಗೆ ಸೇವಿಂಗ್ಸ್ ಆಗುತ್ತೆ ? ಇದು ತಪ್ಪು. ಪೋಲೀಸ್ ಪ್ಯಾದೆಗಳಿಗೆ ಹೆಚ್ಚು ದುಡ್ಡು ಕೊಡಿ. ಕಾಲಿಗೆ ಬಟ್ಟೆ ಸುತ್ತಿಕೊಂಡು ಬಿಸಿಲಿನಲ್ಲಿ ನಿಂತು ಕೆಲಸ ಮಾಡುವ ಪೋಲೀಸಿನವರಿಗೆ ಹೆಚ್ಚು ಅನುಕೂಲ ಮಾಡಿಕೊಡಿ. ಅವರ ಸಂಖ್ಯೆಯನ್ನು ಜಾಸ್ತಿಮಾಡಿ. ಅದು ಬಿಟ್ಟು ಐ.ಜಿ.ಪಿ. ಡಿ.ಐ.ಜಿ. ಗಳನ್ನು ಹೆಚ್ಚು ಮಾಡಿಕೊಂಡು ಜಿಲ್ಲೆ ಜಿಲ್ಲೆಗೆ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳುವುದು ತಪ್ಪು. ಈ ರೀತಿಯಾಗಿ ಹಣದ ಕೊರತೆಯಾಗಿರುವುದು ವಿಷಾದಕರವಾದ ಸಂಗತಿ ಎಂದು ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಅದೇ ರೀತಿಯಲ್ಲಿ ಇಂಜನೀಯರ್ಸ್ ವಿಷಯವಾಗಿ ಹೇಳುವುದಾದರೆ ಚೀಫ್ ಇಂಜನೀಯರ್ಸ್ ಹುದ್ದೆಗಳನ್ನು ಹೆಚ್ಚಿಸುತ್ತಾ ಇದ್ದೀರಿ. ಇದಕ್ಕಾಗಿ ಲಕ್ಷಾನುಗಟ್ಟಲೆ ಖರ್ಚು ಮಾಡುತ್ತಾ ಇದ್ದೀರಿ. ಈಗ ಇರುವ ಹುದ್ದೆಗಳನ್ನೆಲ್ಲಾ ಸ್ಥಳಾಂತರ ಮಾಡಿ ಅಲ್ಲಿ ಚೀಫ್ ಇಂಜನೀಯರ್‌ಗಳನ್ನು ಹೊಸ ದಾಗಿ ಪೋಸ್ಟ್ ಮಾಡುತ್ತಾ ಇದ್ದೀರಿ. ಇದು ಸರ್ವನಾಶದ ಕಡೆ ಈ ರಾಜ್ಯ ಹೋಗುತ್ತಾ ಇರು ವುದಕ್ಕೆ ಕೆಲವು ನಿದರ್ಶನಗಳು. ಇರ್ರಿಗೇಷನ್ ಪ್ರಾಜೆಕ್ಟಿಗೆ ಒಬ್ಬರು, ರೋಡ್ಸ್‌ಗೆ ಒಬ್ಬರು, ಮೈಸೂರಿನಲ್ಲಿ ಒಬ್ಬರು, ಧಾರವಾಡದಲ್ಲಿ ಒಬ್ಬರು, ಹೀಗೆ ಅನೇಕ ಹುದ್ದೆಗಳನ್ನು ಸೃಷ್ಟಿ ಮಾಡುತ್ತಾ ಇದ್ದೀರಿ. ಈ ರಾಜ್ಯದ ಹಣ ವ್ಯರ್ಥವಾಗಿ ಹರಿದು ಹೋಗುತ್ತಾ ಇರುವುದನ್ನು ಈ ಸಪ್ಲಿಮೆಂಟರಿ ಬೇಡಿಕೆಯಲ್ಲಿ ತೋರಿಸಿ ಕೊಟ್ಟಿದ್ದೀರಿ. ಈ ರೀತಿ ನೀವು ಖರ್ಚು ಮಾಡುತ್ತಾ ಇರುವುದು ನ್ಯಾಯವಾದುದಲ್ಲ. ಈವಾಗಲೂ ಸರ್ಕಾರಕ್ಕೆ ಬುದ್ಧಿ ಬರದೇ ಹೋಗಿದ್ದರೆ ಈ ಸಿಬ್ಬಂದಿ ಬಗ್ಗೆ ನಿಮ್ಮ ಅಭಿಪ್ರಾಯ ಏನಿರಬೇಕು ? 100 ಕೋಟಿ ರೂಪಾಯಿ ಆದಾಯ ಇರುವ ಸರ್ಕಾರಕ್ಕೆ ಸಿಬ್ಬಂದಿಗಾಗಿ ಎಷ್ಟು ಕೋಟಿ ರೂಪಾಯಿ ಹಣ ಬೇಕು ? ಇದ ನ್ನೆಲ್ಲಾ ಯೋಚನೆಮಾಡಿಲ್ಲ. ಎ. ಜಿ. ಆರ್. ಕಮಿಟಿ ಆಯಿತು. ಈಗ 3 ಕೋಟಿ ರೂಪಾಯಿ ಉಳಿ ಸುತ್ತೇನೆಂದು ಅಂದಾಜು ಮಾಡಿದ್ದೀರಿ. ನಿಮಗೆ ಹಣಕಾಸಿನ ಬಗ್ಗೆ ಹತೋಟಿ ತಪ್ಪಿದೆ. ನಿಮಗೆ ಇನ್ನೂ ಬುದ್ಧಿ ಬಂದಿಲ್ಲ. ರಾಜ್ಯದ ಬೊಕ್ಕಸ ಇದೆ ಎಂದು ನಿಮಗೆ ಇಷ್ಟಬಂದಂತೆ ಖರ್ಚು ಮಾಡಲು ತಿಳಿದುಕೊಂಡಿದ್ದರೆ ಅದು ತಪ್ಪು ಅಭಿಪ್ರಾಯ. ತಾವು ಹಾಳಾಗುವುದಲ್ಲದೆ ಈ ರಾಜ್ಯವನ್ನೂ ಹಾಳು ಮಾಡುತ್ತಿದ್ದೀರಿ. ಆದುದರಿಂದ ಈ ಹೆಚ್ಚುವರಿ ಬೇಡಿಕೆ ಏನು ಇದೆಯೋ ಅದನ್ನು ದಯೆ ಯಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ. ಈ ಒಂದು ಬೇಡಿಕೆಯಲ್ಲಿ ಸಣ್ಣ ಕೈಗಾರಿಕೆಗಳು ಎಂಬ ಹೆಸರು ಹೇಳಿ ಅದರ ಅಭಿವೃದ್ಧಿಗೋಸ್ಕರವಾಗಿ ತಾವು ಕೇಳಿರುವುದು 2 ಕೋಟಿ 38 ಲಕ್ಷ 43 ಸಾವಿರ ರೂಪಾಯಿಗಳು. ಆದರೆ ಸರ್ಕಾರ ಕೊಟ್ಟಿರುವಂಥಾದ್ದು ಎಲ್ಲಾ ದೊಡ್ಡ ಕೈಗಾರಿಕೆಗಳಿಗೆ. ಈ ಕೈಗಾರಿಕೆಗಳೂ ಕೂಡ ಎಷ್ಟು ಚೆನ್ನಾಗಿ ನಡೆಯುತ್ತವೆ ಎಂಬು ದನ್ನು ನೋಡಿ ಕೊಟ್ಟಿಲ್ಲ. ನಾವು ಭಾವಿಸುವುದಾದರೆ ಈ ಸರ್ಕಾರದಲ್ಲಿ ಆರ್ಥಿಕ ತಜ್ಞರ ಅಭಿ ಪ್ರಾಯಕ್ಕೆ ಮನ್ನಣೆ ಇಲ್ಲ ಮತ್ತು ಸರ್ಕಾರ ದೇಶವನ್ನು ದಿವಾಳಿತನದ ಕಡೆಗೆ ಕೊಂಡೊಯ್ಯುತ್ತಾ ಇದೆ ಎಂಬುದರಲ್ಲಿ ಸಂಶಯವಿಲ್ಲ. ಈಗ ದೇಶದಲ್ಲಿ ಸುಮಾರು 6000 ಇಂಜನೀಯರುಗಳು ನಿರುದ್ಯೋಗಿಗಳಾಗಿದ್ದಾರೆ. ಈಗ ಇರತಕ್ಕ ಮಂಡ್ಯ ನ್ಯಾಷನಲ್ ಷೇಪರ್‌ಮಿಲ್ಸ್‌ನಲ್ಲಿ ಒಂದು ಚೂರು

(ಶ್ರೀ ಎಚ್. ಬಿ. ಜ್ವಾಲನಯ್ಯ)

ಪೇಪರ್ ಕೂಡ ಉತ್ಪತ್ತಿ ಆಗುತ್ತಾ ಇಲ್ಲ ಎಂದು ನಿಮ್ಮ ಗಮನಕ್ಕೆ ತರುತ್ತೇನೆ. ಅಂಥಾದ್ದಕ್ಕೆ ಈ ಸರ್ಕಾರದ ಜವಾಬ್ದಾರಿ ಮೇಲೆ 3 ಲಕ್ಷ 87 ಸಾವಿರ ರೂಪಾಯಿಗಳನ್ನು ಕೊಟ್ಟಿರುವಂಥಾದ್ದು ನಿಜವಾಗಿಯೂ ಶೋಚನೀಯವಾದ ವಿಚಾರ.

ಹೀಗೆಯೇ ಗೌರಿಬಿದನೂರು ಸಕ್ಕರೆ ಕಾರ್ಖಾನೆಯ ವಿಚಾರವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಇದು ಒಂದು ವಿಚಿತ್ರವಾದಂಥ ಸಕ್ಕರೆ ಕಾರ್ಖಾನೆ ಆಗಿದೆ. ಅವರಿಗೂ ಸಹ 30 ಲಕ್ಷ 62 ಸಾವಿರ 549 ರೂಪಾಯಿಗಳನ್ನು ಅಡ್ವಾನ್ಸ್ ಸಾಲವಾಗಿ ಕೊಟ್ಟಿದೆ. ಅದಲ್ಲದೆ ಈ ಸಾರಿಯೂ ಸಿಂಡಿಕೇಟ್ ಬ್ಯಾಂಕ್, ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೋರೇಷನ್ 10 ಲಕ್ಷ ರೂಪಾಯಿಗಳನ್ನು ಈ ಕಾರ್ಖಾನೆಗೆ ಸಾಲ ಕೊಡಬೇಕು ಎಂದರೆ ಇದರ ಅರ್ಥ ಏನು ? ಇದರಲ್ಲಿ ಏನು ಉತ್ಪತ್ತಿ ಮಾಡದೇ ಇದ್ದರೂ ಬ್ಯಾಂಕಿನವರು ಕೊಟ್ಟ ಹಣಕ್ಕೆ ಇವರು ಹೊಣೆಗಾರರಾಗಿದ್ದಾರೆ. ಇದರ ಮ್ಯಾನೇಜಿಂಗ್ ಡೈರೆಕ್ಟರೂ ಸಹ ಸರ್ಕಾರದ ವತಿಯಿಂದ ಇದ್ದಾರೆ. ಇಷ್ಟು ವರ್ಷಗಳಲ್ಲಿ ಈ ಸಕ್ಕರೆ ಕಾರ್ಖಾನೆಯನ್ನು ಒಂದು ಮಾದರಿಯಾಗಿ ತೋರಿಸಬೇಕಾಗಿತ್ತು. ಆದರೆ ಅದನ್ನು ಮಾಡಲು ಸಮರ್ಥರಾಗದೆ 40 ಲಕ್ಷ ರೂಪಾಯಿಗಳನ್ನು ಇದರ ಮೇಲೆ ವ್ಯರ್ಥ ಮಾಡಿರುವುದನ್ನು ನೋಡಿದರೆ ಸರ್ಕಾರದ ಒಂದು ಆರ್ಥಿಕ ಚಿತ್ರವನ್ನು ಯಾವರೀತಿ ಇದೆ ಎನ್ನುವುದನ್ನು ನೋಡಬಹುದು.

ಇನ್ನು ಪಿ. ಡಬ್ಲ್ಯು. ಇಲಾಖೆಯ ಗ್ರಾಂಟುಗಳಲ್ಲಿ ಹೆಚ್ಚು ಹಣ ಇಲ್ಲ. ಹಿಂದೆ ಡಿಪಾರ್ಟ್‌ಮೆಂಟಿನವರು ಖರ್ಚು ಮಾಡಿರತಕ್ಕ ಹಣಕ್ಕೆ ಕಂಟಿಂಜೆನ್ಸಿಯಿಂದ ಕೊಟ್ಟಿರುವ ಹಣವನ್ನು ಆಕ್ಷೇಪಣೆ ಮಾಡುವಾಗ ಇದನ್ನು ಸರಿಪಡಿಸುವುದಕ್ಕೆ ನಮ್ಮ ಮುಂದೆ ಇಟ್ಟಿದ್ದರು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಇದನ್ನು ನಮ್ಮ ಮುಂದೆ ತಂದಿದ್ದಾರೆ. ಈ ಡಿಪಾರ್ಟ್‌ಮೆಂಟ್ ನಿಜವಾಗಿಯೂ ಶ್ರೀಮಾನ್ ರಾಜಗೋಪಾಲಚಾರಿಯವರು ಹೇಳಿರುವಂತೆ 'ಏನಿಮಿ ನಂಬರ್ 1' ಆಗಿದೆ. ಇದರಲ್ಲಿ ಒಂದು ಆರ್ಥಿಕ ಶಿಸ್ತು ಇಲ್ಲ. ಸಾರ್ವಜನಿಕರ ಹಣವನ್ನು ಖರ್ಚು ಮಾಡುವುದನ್ನು ನೋಡಿದರೆ ನಿಜವಾಗಿಯೂ ತೆರಿಗೆಯಿಂದ ವಸೂಲ್ಮಾಡುವ ಹಣಕ್ಕೆ ಮರ್ಯಾದೆಯೇ ಇಲ್ಲದಂತಾಗಿದೆ. ಈ ಡಿಪಾರ್ಟ್‌ಮೆಂಟಿಗೆ ಎಷ್ಟು ಜನ ಚೀಫ್ ಇಂಜನೀಯರ್‌ಗಳು, ಎಷ್ಟು ಜನ ಸೂಪರಿಂಟೆಂಡಿಂಗ್ ಇಂಜನಿಯರ್‌ಗಳು, ಲೆಕ್ಕವೇ ಇಲ್ಲ. ಇದು ತೊಗಲಕ್ ದರ್ಬಾರ್ ಇದ್ದ ಹಾಗೆ ಆಗಿದೆ; ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ಹೆಲ್ತ್ ಡಿಪಾರ್ಟ್‌ಮೆಂಟ್ ವಿಷಯ. ಎಷ್ಟೋ ಕಡೆ ಆಸ್ಪತ್ರೆಗಳಲ್ಲಿ ಡಾಕ್ಟರೇ ಇಲ್ಲ. ಕೆಲವು ಕಡೆ ಆಸ್ಪತ್ರೆಗಳಿಲ್ಲ; ಗಂಡಸು ಡಾಕ್ಟರುಗಳೇ ಹೆರಿಗೆ ಕೆಲಸವನ್ನು ಎಷ್ಟೋ ಆಸ್ಪತ್ರೆಗಳಲ್ಲಿ ಮಾಡುತ್ತಾ ಇದ್ದಾರೆ. ಈ ಒಂದು ಕೆಲಸವನ್ನು ಹೆಲ್ತ್ ಡಿಪಾರ್ಟ್‌ಮೆಂಟಿನವರು ಮಾಡುತ್ತಾ ಇರುವುದನ್ನು ನೋಡಿದರೆ ನಾಚಿಕೆಯಾಗುತ್ತದೆ. ಈ ಇಲಾಖೆಗೆ ಖರ್ಚು ಮಾಡುವ ಹಣ ಬರೀ ಅಡ್ಮಿನಿಸ್ಟ್ರೇಷನ್‌ಗೆ ಖರ್ಚು ಮಾಡುತ್ತಾ ಇದ್ದೀರಿ ಎಂದು ಕಾಣುತ್ತದೆ. ಲೇಡಿ ಡಾಕ್ಟರುಗಳು ಇಲ್ಲ ಎಂದು ಇವರು ಹೇಳುವ ಮಾತು ಏನಿದೆ ಅದು ಸರಿಯಲ್ಲ. ನೀವು ಸರ್ಕಾರವನ್ನು ಬಿಟ್ಟು ಹೊರಡಿ. ನಾವು ಅದನು ಸರಿ ಮಾಡುತ್ತೇವೆ. ಅದಕ್ಕಾಗಿ ಅಷ್ಟು ಯೋಚನೆ ಮಾಡುವ ಅಗತ್ಯವಿಲ್ಲ. ನಿಮ್ಮ ಕೈಲಿ ಇದು ಆಗದೇ ಇರುವುದರಿಂದ ಲೇಡಿ ಡಾಕ್ಟರ್ಸ್ ಇಲ್ಲವೆಂದು ಹೇಳುತ್ತೀರಿ. ಮೆಡಿಕಲ್ ಕಾಲೇಜುಗಳನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ! ಬೇಕಾದಷ್ಟು ಜನ ಡಾಕ್ಟರುಗಳು ಇದ್ದಾರೆ. ನಿಮಗೆ ಗೊತ್ತಿಲ್ಲ ವ್ಯವಸಾಯಾಭಿವೃದ್ಧಿಗೋಸ್ಕರ ಸರ್ಕಾರ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಾ ಇರುವ ಸಂದರ್ಭದಲ್ಲಿ ವ್ಯವಸಾಯವನ್ನು ಪ್ರಗತಿದಾಯಕವಾದ ಮಾರ್ಗದಲ್ಲಿ ಕೊಂಡೊಯ್ಯುವುದಕ್ಕೆ ಅಧಿಕಾರಿಗಳ ಜಾತ್ರೆಯನ್ನು ಹೆಚ್ಚು ಮಾಡಿದ್ದಾರೆ. ಎಷ್ಟು ಜನ ಡೈರೆಕ್ಟರುಗಳು, ಎಷ್ಟು ಜನ ಡೆಪ್ಯುಟಿ ಡೈರೆಕ್ಟರುಗಳು, ಸ್ಪೆಷಲಿಸ್ಟ್ ಆದವರು ಎಷ್ಟು ಜನ ಇವರು ಇಷ್ಟು ಜನರಿದ್ದರೂ ರೈತರಿಗೆ ದೊರಕಬೇಕಾದಂಥ ಸಹಾಯ ಯಾವ ರೀತಿಯಲ್ಲೂ ದೊರಕುತ್ತಾ ಇಲ್ಲವೆಂದು ಹೇಳಿದರೆ ಖಂಡಿತ ತಪ್ಪಾಗಲಾರದು. ಸರ್ಕಾರದಲ್ಲಿ ಮಿತವ್ಯಯವನ್ನು ಬೆಳಕಿಗೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಲೇ ಇದ್ದೇವೆ. ಬಡ್ಜೆಟ್ಟನ್ನು ಇಲ್ಲಿ ಹಿಂದೆ ಮಂಡಿಸಿದಾಗ ನಾವು ಉಳಿತಾಯ ಮಾಡಿದ್ದೇವೆ ಎಂಬುದಾಗಿ ಆರ್ಥಿಕ ಮಂತ್ರಿಗಳು ಬೆನ್ನು ತಟ್ಟಿಕೊಂಡರು. ಆದರೆ ಈಗ ಹೇಳಲಿ ಎಷ್ಟು ಉಳಿತಾಯ ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಅದರ ಜೊತೆಗೆ ಫೈವ್‌ಸ್ಟಾರ್ ಹೋಟೆಲ್ ಇಂಡಿಯಾ ಎಂಬುದನ್ನು ಬೇರೆ ಇಲ್ಲಿ ಕಟ್ಟುತ್ತಿದ್ದಾರೆ ಇದು ಹೇಗಿದೆಯೆಂದರೆ ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂ ಎಂಬಂತಾಗಿದೆ. ಈ ಹೋಟೆಲ್‌ಗಾಗಿ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದ ಮೇಲೆ ನಮ್ಮ ದುಡ್ಡು ಯಾವ ರೀತಿಯಲ್ಲಿ ಖರ್ಚಾಗುತ್ತಿದೆ ಎಂಬುದನ್ನು ನೋಡಬೇಕು.

ಒಬ್ಬ ಮಾನ್ಯ ಸದಸ್ಯರು.—ಅದು ಕೇಂದ್ರ ಸರ್ಕಾರದ್ದು.

ಶ್ರೀ ಎಚ್. ಬಿ. ಜ್ವಾಲನಯ್ಯ.—ಅದರೂ ಅದೂ ಕೂಡ ನಮ್ಮ ದುಡ್ಡು ತಾನೇ; ಅದು ಏತಕ್ಕೋಸ್ಕರ ಬೇಕು ? ಸಾಮಾನ್ಯ ಜನರು ವಾಸ ಮಾಡುವುದಕ್ಕೆ ಮನೆ ಕಟ್ಟಿಕೊಡಲು ನಮ್ಮಲ್ಲಿ ಹಣವಿಲ್ಲ, ನಾವು ಮಾತ್ರ ಉತ್ತಮ ಕಟ್ಟಡದಲ್ಲಿರಬೇಕು ಎಂದು ಹೇಳಿದರೆ ಹೇಗೆ ? ಸರ್ಕಾರದ ಈಗಿನ ಒಂದು ದಾಸ್ಯತ್ವ ನೀತಿ ಹೋಗಬೇಕು. ನನ್ನ ಮಿತ್ರರಾದಂಥ ಮಾನ್ಯ ಶ್ರೀ ಗೋಪಾಲಗೌಡರು ಹೇಳಿದ ಹಾಗೆ ಈಗಿನ ಸರ್ಕಾರವನ್ನು ತಳ್ಳಿ ಮುಂದೆ ಯಾರಾದರೂ ಬೇರೆಯವರನ್ನು ಅಲ್ಲಿ ಕೂಡಿಸುವುದಕ್ಕೆ ಮುಂಚೆ ನೀವೇ ಹೊರಟು ಹೋಗಿ ಎಂದು ನಾನು ಹೇಳುತ್ತೇನೆ.

ಇನ್ನು ತಾಲ್ಲೂಕು ಆಫೀಸುಗಳು ಈಗ ತಿಪ್ಪೆಗಳಂತೆ ಆಗಿವೆ. ಒಂದು ಅರ್ಜಿ ಕೊಟ್ಟರೆ ಅದನ್ನು ಪುನಃ ಏನಾದರೂ ವಾಪಸ್ಸು ಪಡೆಯಬೇಕಾದರೆ ಒಂದು ಪೋಲೀಸ್ ಪಡೆ ಬೇಕು. ಈಗ ಎನ್.ಇ.ಎಸ್. ಬ್ಲಾಕುಗಳು ಒಂದು ಕಡೆ, ಹೆಲ್ತ್ ಡಿಪಾರ್ಟ್‌ಮೆಂಟ್ ಒಂದು ಕಡೆ, ಪಿ.ಡಬ್ಲ್ಯೂ.ಡಿ. ಶಾಖೆ ಒಂದು ಕಡೆ ವಿದ್ಯಾ ಇಲಾಖೆ ಒಂದು ಕಡೆ ಹೀಗೆ ಬೇಕಾದಷ್ಟು ಆಫೀಸುಗಳು ಇದ್ದರೂ ಅನೇಕ ಆಫೀಸುಗಳಲ್ಲಿ ಇರತಕ್ಕವರಿಗೆ ಕೆಲಸವೇ ಇಲ್ಲ. ಕೆಲಸವಿಲ್ಲದೇ ಇರುವವರನ್ನು ಮೊದಲು ತೆಗೆದು ಹಾಕಿ. ಇಷ್ಟೆಲ್ಲಾ ಹೇಳಿದರೂ ಕೂಡ ಇಲ್ಲಿಯವರೆಗೆ ಬಂದಂಥ ಸಾರ್ವಜನಿಕ ಫಂಡನ್ನು ನೀವು ಮನಸ್ಸಿಗೆ ಬಂದಂತೆ ಖರ್ಚು ಮಾಡಿ, ಅದರ ಬಗ್ಗೆ ಸರಿಯಾದ ಗಮನವನ್ನು ಇಟ್ಟುಕೊಳ್ಳದೇ ಇರುವುದು ನಿಮಗೂ ಒಳ್ಳೆಯದಲ್ಲ, ದೇಶಕ್ಕೂ ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ನಿಮ್ಮನ್ನು ಪ್ರಾರ್ಥಿಸಿಕೊಳ್ಳುವುದು ಇಷ್ಟೇ. ನೀವು ಹಣಕಾಸಿನ ಬಗ್ಗೆ ಇಲ್ಲಿಯವರೆಗೂ ವ್ಯಯ ಮಾಡಿರುವುದನ್ನು ನೋಡಿದರೆ ನಿಮ್ಮ ಒಂದು ದಬ್ಬಾಳಿಕೆ, ಅಟ್ಟಹಾಸವನ್ನು ಮುಗಿಸುವುದಕ್ಕೆ ಖಂಡಿತವಾಗಿ ನಾವು ಪ್ರಯತ್ನ ಮಾಡಬೇಕಾಗಿದೆ. ಜನತೆ ಈಗ ಅಧಿಕಾರದಲ್ಲಿರುವವರನ್ನು ಖಂಡಿತ ಕ್ಷಮಿಸುವುದಿಲ್ಲ. ನೀವು ದುರ್ಗತಿಗೆ ಹೋಗುವ ಒಂದು ಅವಕಾಶ ಈಗ ಬರುತ್ತಾ ಇದೆಯೆಂದು ಹೇಳಿ, ಅದಕ್ಕಿಂತ ಮುಂಚೆಯೇ ನೀವು ಎಚ್ಚೆತ್ತುಕೊಳ್ಳಲಿ ಎಂಬುದಾಗಿ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರತಕ್ಕಂಥ 2ನೇ ಕಂತು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಏನಿದೆ ಅದನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತೇನೆ. ಇವತ್ತು ಇಲ್ಲಿ ಆರ್ಥಿಕ ಸಚಿವರು ಇಲ್ಲ. ಅವರ ಪರವಾಗಿ ಬಹುಶಃ ಮಾನ್ಯ ಶ್ರೀ ಜತ್ತಿಯವರು ಉತ್ತರ ಕೊಡುತ್ತಾರೆಂದು ನನಗೆ ಕಾಣುತ್ತದೆ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಇಲ್ಲದಿದ್ದರೆ ಕಳೆದ ಮೂರು ವರ್ಷಗಳಿಂದ ಈ ಸಭೆಯಲ್ಲಿ ಕೊಟ್ಟಂಥ ವಚನ, ಅದರ ಬಗ್ಗೆ ಸರ್ಕಾರದವರು ತೆಗೆದುಕೊಂಡಂಥ ನಿಲುವು ಇವತ್ತು ಎಲ್ಲಿ ಹೋಗಿದೆಯೆಂದು ಕೇಳಬಹುದಾಗಿತ್ತು. ಪ್ರತಿಯೊಂದು ಡಿಮ್ಯಾಂಡ್‌ನಲ್ಲಿಯೂ ನೋಡುವುದಾದರೆ ಎಲ್ಲಾ ನ್ಯೂ ಸರ್ವೀಸ್, ಅಂದಮೇಲೆ ಎಕ್ಸ್‌ಪೆಂಡಿಚರ್ ಹೇಗೆ ಮೀಟ್ ಮಾಡುತ್ತಾರೆ ! ಮೇಜರ್ ಹೆಡ್, ಸೇವಿಂಗ್ಸ್ ಆಗುತ್ತವೆ, ಅದರಿಂದ ಇದನ್ನು ಈ ವರ್ಷಕ್ಕೆ ಸರಿದೂಗಿಸುತ್ತೇವೆ, ಅದಕ್ಕೋಸ್ಕರ ಟೋಕನ್ ಗ್ರಾಂಟು ಕೇಳುತ್ತಾ ಇದ್ದೇವೆಂದು ಹೇಳುತ್ತಾರೆ. ಅದರ ಪರಿಣಾಮ ಏನು ಎಂಬುದನ್ನು ಈಗ ಹೇಳಬೇಕು. ನೀವು ಕೊಟ್ಟಿರುವ ಸಪ್ಲಿಮೆಂಟರಿ ಡಿಮ್ಯಾಂಡುಗಳಲ್ಲಿ ಹೊಸ ಹುದ್ದೆಗಳನ್ನು, ಹೊಸ ಅಧಿಕಾರಿಗಳನ್ನು ನಿರ್ಮಾಣ ಮಾಡುವುದನ್ನು ಮಾತ್ರ ಕೈಗೊಂಡಿದ್ದೀರಿ. ಇದರಲ್ಲಿ ಏನಾದರೂ ಡೆವಲಪ್‌ಮೆಂಟಿಗೆ ಸಂಬಂಧಪಟ್ಟದ್ದು ಯಾವುದಾದರೂ ಇದೆಯೇ ಎಂಬುದನ್ನು ತಿಳಿಸಬೇಕು. ಇದಕ್ಕೆ ಕೊನೆ, ಮಿತಿ ಇಲ್ಲದೆ ಇವತ್ತು ಕೊಠಾರಿಯವರು ಹಾಗೂ ಎ. ಜಿ. ರಾಮಚಂದ್ರರಾಯರು ಕೊಟ್ಟಿರುವ ವರದಿಯನ್ನು ನೋಡಿದರೆ ಎಸ್ಟಾಬ್ಲಿಷ್‌ಮೆಂಟಿಗಾಗಿ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಓದಿ ನೋಡಿ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಮಾತನಾಡುವ ಕಾಲದಲ್ಲಿ ಇದನ್ನು ಅಂಕಿ ಅಂಶಗಳ ಪ್ರಕಾರ ದೃಢೀಕರಿಸಬೇಕೆಂದು ಮಾತನಾಡಿದ್ದಾರೆ. ನಾನು ಅವರು ಹೇಳಿದ್ದನ್ನು ಸಮರ್ಥನೆ ಮಾಡುತ್ತೇನೆ. ಪ್ರತಿಯೊಂದು ಇಲಾಖೆಗೆ ಸಂಬಂಧಪಟ್ಟ ಹಾಗೆ ಅಧಿಕಾರಿಗಳನ್ನೂ ಹಾಗೂ ಕೆಲವು ವೆಹಿಕಲ್‌ಗಳನ್ನು ಸ್ಟೇಟ್ ವಿಜಿಲೆನ್ಸ್ ಕಮಿಷನ್ ವರ್ಕ್ ಜಾಸ್ತಿಯಾದ್ದರಿಂದ ಒದಗಿಸುತ್ತಾ ಇದ್ದಾರೆ. ಅಲ್ಲಿಗೆ ಈಗ 4 ವ್ಯಾನ್ಸ್, ಒಂದು ಸ್ಟೇಷನ್ ವ್ಯಾಗನ್, ಒಂದು ಅಂಬಾಸಡರ್ ಕಾರ್, ವ್ಯವಸಾಯ ಇಲಾಖೆಗೆ 8 ಟ್ರಾಕ್ಟರ್ಸ್, ಸ್ಟೇಷನ್ ವ್ಯಾಗನ್ಸ್, ಜೀಪ್ಸ್ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಬಹಳ ನಾಚಿಕೆಯಾಗುತ್ತದೆ. ಇವತ್ತು ಇರತಕ್ಕ ದುಃಸ್ಥಿತಿಯಲ್ಲಿ, ಯಾವ ಒಂದು ಅಭಿವೃದ್ಧಿ ಕಾರ್ಯವನ್ನೂ ಮಾಡತಕ್ಕ ಯೋಗ್ಯತೆ ಸರ್ಕಾರಕ್ಕೆ ಇಲ್ಲದ ಕಾಲದಲ್ಲಿ ಅಷ್ಟು ಹಣವನ್ನು ಕೇವಲ ತಮ್ಮ ಹಿಂಬದಿಯಲ್ಲಿರತಕ್ಕ ಜನಗಳಿಗೆ ಅನುಕೂಲ ಮಾಡುವುದಕ್ಕೆ ವ್ಯಯ ಮಾಡುವುದು ಖಂಡಿತವಾಗಿ ಸರಿಯಾಗಿಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ. ಇವತ್ತು ಅನೇಕ

(ಶ್ರೀ ಎಚ್. ಡಿ. ದೇವೇಗೌಡ)

ಮಾನ್ಯ ಸದಸ್ಯರು ಮಾತನಾಡಿದರು. ಕೆಲವರು ಇವತ್ತು ಸರ್ಕಾರದವರು ಲೋಕೋಪಯೋಗಿ ಶಾಖೆಯನ್ನು ರೀ-ಆರ್ಗನೈಜ್ ಮಾಡುವುದಕ್ಕೆ ಹೊರಟಿದ್ದಾರೆಂದು ಹೇಳಿದರು. ಇವತ್ತು ಮೇಜರ್ ಇರ್ರಿಗೇಷನ್ನಿನಲ್ಲಿ ಸೌತ್ ಮತ್ತು ನಾರ್ತ್ ಎಂಬುದಾಗಿ ಎರಡು ಜೋನ್‌ಗಳಾಗಿ ಕ್ರಿಯೇಟ್ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದಲ್ಲಿ ಏನಾದರೂ ಸಮರ್ಥನೆ ಮಾಡತಕ್ಕ ಅಂಕಿ ಅಂಶಗಳು ಇವೆಯೋ ಎಂದು ನಾನು ಕೇಳಲು ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಒಂದು ಜೋನನ್ನು ಕ್ರಿಯೇಟ್ ಮಾಡಬೇಕಾದರೆ ವರ್ಕ್‌ಲೋಡ್ ಎಷ್ಟು ಇರಬೇಕು ಎಂಬುದನ್ನು ನಾನು ಬಜೆಟ್ ಎಸ್ಟಿಮೇಟ್ ಒಂದರಿಂದಲೇ ಸಮರ್ಥನೆ ಮಾಡುತ್ತೇನೆ. ಇವತ್ತಿನ ದಿವಸ ಒಬ್ಬ ಚೀಫ್ ಇಂಜನಿಯ ರಿಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಅವಕಾಶವಿಲ್ಲ. ಉದಾಹರಣೆಗೆ ಹೇಳಬೇಕಾದರೆ ಈಗ ಹೇಮಾವತಿ ಸರ್ಕಲ್ ಕ್ರಿಯೇಟ್ ಮಾಡಿದ್ದಾರೆ. ಸುಮಾರು 20 ಲಕ್ಷ ರೂಪಾಯಿಗಳಷ್ಟು ಹಣವನ್ನು ಅವರ ಹತ್ತಿರ ಕೊಟ್ಟಿಲ್ಲ. 9-10 ಲಕ್ಷ ರೂಪಾಯಿಗಳು ಎಸ್ಟಾಬ್ಲಿಷ್ ಮೆಂಟಿಗೆ ಖರ್ಚಾಗುತ್ತದೆಂದು ಹೇಳುತ್ತಾರೆ. ಇದರಿಂದ ಇವರ ವ್ಯವಹಾರವೇ ನನಗೆ ಅರ್ಥವಾಗು ವುದಿಲ್ಲ. ಇದಕ್ಕಾಗಿ ಈಗ ಒಂದು ಜೋನನ್ನು ಕ್ರಿಯೇಟ್ ಮಾಡಿ ಒಂದು ಲಕ್ಷ 80 ಸಾವಿರ ರೂಪಾಯಿ ಗಳನ್ನು ಖರ್ಚು ಮಾಡಬೇಕೆಂದು ಹೇಳಿದರೆ ಹೇಗೆ? ಈ ಸಭೆಯ ಅಧಿಕಾರವನ್ನು ಇವರೇ ದುರುಪ ಯೋಗ ಮಾಡುತ್ತಿದ್ದಾರೆ. ಈ ಸಭೆಗೆ ಕೊಟ್ಟಿರತಕ್ಕ ಅಧಿಕಾರವೇನಿದೆ ಅದನ್ನು ಸರಿಯಾಗಿ ಉಪ ಯೋಗಿಸದೆ ಇಂತಹ ಆಡಳಿತ ವ್ಯವಹಾರವನ್ನು ನಡೆಸುವುದರಿಂದ ಇವರಿಗೆ ಎಂದಿಗೂ ಗೌರವ ತರುವು ದಿಲ್ಲವೆಂಬುದನ್ನು ಇವರು ಮನವರಿಕೆ ಮಾಡಿಕೊಳ್ಳಬೇಕು. ಈಗ 8 ಜನ ಚೀಫ್ ಇಂಜನಿಯರು ಗಳು ಇದ್ದಾರೆಂದು ರಾಜ್ಯ ಸರ್ಕಾರದವರು ಹೇಳಿದರು. ಹಿಂದೆ ಒಬ್ಬ ಚೀಫ್ ಇಂಜನಿಯರ್ ಮೈಸೂರು ದೇಶದ ಆಡಳಿತವೆಲ್ಲವನ್ನೂ ಮಾಡುತ್ತಿದ್ದರು. ಆದ್ದರಿಂದ ಈಗ ಇಷ್ಟು ಜನ ಏಕೆ? 8 ಜನ ಚೀಫ್ ಇಂಜನಿಯರುಗಳು ಈಗ ಬೇಕೆ? ಒಬ್ಬ ಚೀಫ್ ಇಂಜಿನಿಯರ್ ಕಾರ್ಯ ಎಷ್ಟು ಇರಬೇಕೆಂದು ನಿಗದಿ ಮಾಡಿದ್ದಾರೆಯೇ? ಈ ಸಂಸ್ಥಾನಕ್ಕೆ ಯಾವುದಾದರೂ ಒಂದು ಆಡಳಿತ ನೀತಿಯನ್ನು ತೋರಿಸಿ ಆ ಒಂದು ಹೊಂದಾಣಿಕೆ ಮೇಲೆ ರೀ-ಆರ್ಗನೈಜ್ ಮಾಡಿದ್ದಾರೆಯೇ? ಇವತ್ತಿನ ದಿವಸ ಪ್ರತಿಯೊಬ್ಬ ಚೀಫ್ ಇಂಜನಿಯರ್ ಅವರ ವರ್ಕ್‌ಲೋಡ್ ನೋಡದೆ ಪ್ರತಿ ಹೆಡ್ ನಲ್ಲಿಯೂ ಹಣವಿಲ್ಲವೆಂದು ತಿಳಿಸಿದ್ದಾರೆ. ಕೆಲವು ಆಫೀಸುಗಳನ್ನು ಕ್ರಿಯೇಟ್ ಮಾಡಿದ್ದಾರೆ. ಸಿಬ್ಬಂದಿಯನ್ನು ಬೇರೆ ನಿರ್ಮಾಣ ಮಾಡಿದ್ದಾರೆ. ಅಪ್ಪರ್ ಕೃಷ್ಣಾಗೆ ಒಬ್ಬ ಚೀಫ್ ಇಂಜನಿಯರ್ ಹುದ್ದೆಯನ್ನು ನಿರ್ಮಾಣ ಮಾಡುವುದು ಬಹಳ ನಾಚಿಕೆಗೇಡಿತನ. ಕೇವಲ ಅಧಿಕಾರಿಗಳ ಸ್ಥಾನ ಗಳನ್ನು ನಿರ್ಮಾಣ ಮಾಡುವುದರಿಂದ ಈ ರಾಜ್ಯಕ್ಕೆ ಅದು ಒಂದು ಒಳ್ಳೆಯ ಸೂಚನೆಯೆಂದು ತಿಳಿದುಕೊಂಡಿದ್ದೀರಾ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇದರಿಂದ ಸರ್ಕಾರದ ನೀತಿ ಏನು ಎಂಬುದನ್ನು ನಾನು ಕೇಳಲು ಇಚ್ಛೆ ಪಡುತ್ತೇನೆ. ಇನ್ನು ಮೇಜರ್ ಡ್ಯಾಂ ಇಲಾಖೆಯವರು ಸ್ವತಃ ಜಾಗ್ರತಿಯಿಂದ ಕೆಲಸವನ್ನು ನಿರ್ವಹಣೆ ಮಾಡುತ್ತಾ ಇಲ್ಲ. ಅದನ್ನೆಲ್ಲಾ ಕಂಟ್ರಾಕ್ಟರುಗಳ ಮೂಲಕ ಮಾಡುತ್ತಿದ್ದಾರೆ. ಈಗಿನ ಪ್ರಮಾಣದಲ್ಲಿ ಕೆಲಸಗಳನ್ನು ನಿರ್ಮಾಣ ಮಾಡುವುದಾದರೆ ಅಧಿಕಾರಿಗಳ ಸಂಖ್ಯೆ ಹೆಚ್ಚು ಬೇಕಾಗುತ್ತದೆ. ಒಳ್ಳೆಯ ಕ್ವಾಲಿಟಿ ವರ್ಕ್, ಸ್ಪೆಸಿಫಿಕೇಷನ್ ಅನುಸರಿಸಿ ಕೆಲಸ ಮಾಡುತ್ತಾರೆಂದರೆ ಅಧಿಕಾರಿಗಳ ಸಂಖ್ಯೆಯನ್ನು ಆಗ ಹೆಚ್ಚು ಮಾಡಬಹುದು. ಎಲ್ಲಾ ಕಡೆಗಳಲ್ಲಿಯೂ ಕೆಲಸಗಳನ್ನೂ ಕಂಟ್ರಾಕ್ಟ್ ಸಿಸ್ಟಂನಲ್ಲಿ ಮಾಡಿಸುತ್ತಿದ್ದಾರೆ. ಹೀಗಿದ್ದರೂ ಕೂಡ ಏತಕ್ಕೆ ಇಷ್ಟೊಂದು ಅಧಿಕಾರಿಗಳು ಬೇಕು? -

ಇನ್ನು ಮುಜರಾಯಿ ಜಮೀನನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಅಮೃತಮಹಲ್ ಜಮೀನಿನಷ್ಟೇ ಈಗ ಸರ್ಕಾರಕ್ಕೆ ಉಳಿದಿರುವುದು. ಅದನ್ನು ಮಾರುವುದಾದರೆ ಇನ್ನೇನು ಉಳಿಯು ತ್ತದೆ? ಆಮೇಲೆ ಹಾಗೆಯೇ ಪಾಪ ಬಡ ಅರ್ಚಕರು ತಲೆ ತಲಾಂತರದಿಂದ 2 ಎಕರೆ 3 ಎಕರೆ ದೇವ ಸ್ಥಾನದ ಜಮೀನನ್ನು ಉತ್ತುಕೊಂಡು ಜೀವನ ಮಾಡುತ್ತಿದ್ದಾರೆ. ಆ ದೇವಸ್ಥಾನಗಳ ಮುಜರಾಯಿ ಜಮೀನನ್ನು ಮಾರುವುದಾದರೆ ಆ ಬಡ ಅರ್ಚಕರು ಜೀವನ ಮಾಡುವುದು ಹೇಗೆ, ಮತ್ತು ದೇವಸ್ಥಾನ ಗಳಲ್ಲಿ ಪೂಜೆ ಮುಂತಾದ ಕಲ್ಯಾಣ ಕಾರ್ಯಗಳು ನಡೆಯುವುದು ಹೇಗೆ? ಎಲ್ಲೋ ಸಣ್ಣ ಪುಟ್ಟ ಆದಾಯ ಬರತಕ್ಕಂಥ ಅಮೃತಮಹಲ್ ಜಮೀನು ಮತ್ತು ಮುಜರಾಯಿ ಜಮೀನನ್ನು ಸರ್ಕಾರದ ವರು ಮಾರಾಟ ಮಾಡುತ್ತೇವೆಂದರೆ ಇದು ಎಂತಹ ಸರ್ಕಾರದ ನೀತಿ ಎಂಬುದು ನನಗೆ ಅರ್ಥವಾಗು ವುದಿಲ್ಲ. ಈಗ ಬೆಂಗಳೂರಿನಲ್ಲಿ ಅಧಿಕಾರಿಗಳ ತಂಡವನ್ನೇ ನಿರ್ಮಾಣ ಮಾಡಿದ್ದಾರೆ. ಅದು ಪರವಾಯಿಲ್ಲ ಈ ಸಣ್ಣ ಪುಟ್ಟ ಮುಜರಾಯಿ ಜಮೀನನ್ನು ಸರ್ಕಾರದವರು ಮಾರಾಟಮಾಡುವುದಾದರೆ ಅರ್ಚಕರಿಗೆ ಸಂಬಳ ಕೊಡುವವರು ಯಾರು ಎಂಬುದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ಈ ಜಮೀನು

ಡಿಮ್ಯಾಂಡಿಗೆ ಸಂಬಂಧಕಟ್ಟದ್ದು ಏನಿದೆ ಅದು ನನಗೆ ಅರ್ಥವಾಗುವುದಿಲ್ಲ. ಇವರಿಗೆ ದುಡ್ಡು ಬೇಕು ಎಂದರೆ ರಾಜ್ಯವನ್ನಾದರೂ ಮಾರಾಟ ಮಾಡುತ್ತಾರೆ. ಇದು ತಮ್ಮ ಆರ್ಥಿಕ ದಿವಾಳಿತನವನ್ನು ತೋರಿಸುವ ಕುರುಹು ಎಂದು ಹೇಳಿದರೆ ತಪ್ಪಾಗಲಾರದು. ಮುಜರಾಯಿ ಜಮೀನನ್ನು ಮಾರಾಟ ಮಾಡಿದರೆ, ಆ ಜಮೀನಿನ ಮೇಲೆ ಅವಲಂಬಿಸಿರತಕ್ಕ, ದೇವಸ್ಥಾನಗಳಲ್ಲಿ ಪೂಜೆಯನ್ನು ನಡೆಸಿಕೊಂಡು ಹೋಗತಕ್ಕ ಅರ್ಚಕರ ಗತಿ ಏನು ? ದೇವಸ್ಥಾನಗಳಲ್ಲಿ ಪೂಜೆ ಮಾಡುವುದಕ್ಕೆ ಅರ್ಚಕರನ್ನು ಸಂಬಳ ಕೊಟ್ಟು ಸರ್ಕಾರದವರು ನೇಮಕ ಮಾಡುತ್ತಾರೆಯೋ ? ಅರಣ್ಯ ಇಲಾಖೆ ಎಲ್ಲೂ ಕಾಡ ಅಧಿಕಾರಿಗಳ ಒಂದು ತಂಡವನ್ನು ನಿರ್ಮಾಣ ಮಾಡಿದ್ದಾರೆ. ಪೂರ್ವಕಾಲದಲ್ಲಿ ಬೆಳೆದಂತಹ ಅರಣ್ಯವನ್ನ ಕಡಿದು ಮಾರಿ ಬೀಜವನ್ನು ನೆಡತಕ್ಕ ಹವ್ಯಾಸ ಈ ಫಾರೆಸ್ಟ್ ಇಲಾಖೆಯುವಲ್ಲಿ ಬಂದಿದೆ. ಎಷ್ಟು ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಎಷ್ಟು ಹೊಸ ಫಾರೆಸ್ಟನ್ನು ಸರ್ಕಾರದವರು ಬೆಳೆಸಿದ್ದಾರೆ ಎನ್ನುವ ಅಂಕಿ ಅಂಶಗಳನ್ನು ಕೊಡುತ್ತೀರಾ, ಎಂದು ನಾನು ಸರ್ಕಾರದವರನ್ನು ಕೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 44ರಲ್ಲಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿಗೆ 65 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಇದಕ್ಕೆ ಈ ಸಭೆಯ ಒಪ್ಪಿಗೆಯನ್ನು ಪಡೆಯುವುದಕ್ಕಾಗಿ ಇಲ್ಲಿ ತಂದಿದ್ದಾರೆ. ಈ ಹಣಕ್ಕೆ 9 ಪರ್ಸೆಂಟಿನಂತೆ ಬಡ್ಡಿಯನ್ನ ಚಾರ್ಜ್ ಮಾಡುತ್ತಾರೆ. ಆದರೆ ತಮಗೆ ಬೇಕಾದವರು ಇರತಕ್ಕ ಶಂಕರ ಟೆಕ್ಸ್‌ಟೈಲ್ ಮಿಲ್ಲಿಗೆ ಕೊಟ್ಟಿರತಕ್ಕ 10 ಲಕ್ಷ ರೂಪಾಯಿಗಳಿಗೆ, ಕಂತುಗಳಲ್ಲಿ ಕೊಡುವುದಕ್ಕೋಸ್ಕರ 2½ ಪರ್ಸೆಂಟ್ ರಿಬೇಟ್ ಕೊಟ್ಟು 5 ಪರ್ಸೆಂಟ್ ಬಡ್ಡಿಯನ್ನು ಚಾರ್ಜ್ ಮಾಡುತ್ತಾರೆ. ರೈತರಿಗೆ ಅನುಕೂಲವಾಗತಕ್ಕಂಥ ಅಗ್ರೋ ಇಂಡಸ್ಟ್ರೀಸ್‌ಗೆ ಕೊಟ್ಟಿರತಕ್ಕ 65 ಲಕ್ಷ ರೂಪಾಯಿಗಳಿಗೆ 9 ಪರ್ಸೆಂಟ್ ಬಡ್ಡಿಯನ್ನು ಹಾಕಿದ್ದಾರೆ. ರೈತನನ್ನ ಉದ್ಧಾರ ಮಾಡುವುದಕ್ಕೆ ಎಲ್ಲರೂ ಇಲ್ಲಿ ಬಂದು ಕುಳಿತುಕೊಂಡು ಇಂಥ ವ್ಯವಹಾರವನ್ನು ಮಾಡುವುದು ಸರಿಯಲ್ಲ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಈ ಅಗ್ರೋ ಇಂಡಸ್ಟ್ರಿಗೆ ಕೊಟ್ಟಿರತಕ್ಕ ಹಣಕ್ಕೆ 5 ರೂ. ನಂತೆ ಬಡ್ಡಿ ಹಾಕಬೇಕು.

ಇನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಎರಡು ಲಕ್ಷ ಚಿಲ್ಲರೆ ರೂಪಾಯಿಗಳನ್ನು ನ್ಯೂ ವರ್ಕಿಗೋಸ್ಕರವಾಗಿ ಒಂದು ಸೇತುವೆಗೆ ಖರ್ಚು ಮಾಡಿದ್ದಾರೆ. ಈಗ ಎರಡು ವರ್ಷಗಳಿಂದ ತೆಗೆದುಕೊಳ್ಳಬೇಕಾದ ಬೇರೆ ಯಾವ ಕೆಲಸವೂ ಇರಲಿಲ್ಲವೇ ? ತಮಗೆ ಯಾವುದು ಬೇಕೋ ಅಂಥಾದ್ದನ್ನು ತೆಗೆದುಕೊಳ್ಳುತ್ತಾರೆ. ಗುಲ್ಬರ್ಗಾದ ಒಂದು ರೇಂಜ್ ಆಫೀಸಿಗೆ ಸರ್ಕಾರದವರು ಹಣವನ್ನು ಖರ್ಚು ಮಾಡಿದ್ದಾರೆ ತಮಗೆ ಏನು ಏನು ಬೇಕೋ ಅದನ್ನು ಸ್ವಾರ್ಥ ದೃಷ್ಟಿಯಿಂದ ವ್ಯವಹಾರವನ್ನು ಮಾಡುವಂತಹ ಈ ಸರ್ಕಾರದ ಆಡಳಿತ ನೀತಿ ಏನಿದೆಯೋ ಅದು ಸರಿಯಾದ್ದಲ್ಲ ಎಂದು ಈ ಸಂದರ್ಭದಲ್ಲಿ ಹೇಳಿ ನಾನು ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ವಿರೋಧ ಮಾಡುತ್ತೇನೆ.

† Sri M. S. KRISHNAN (Malleswaram).—Mr. Speaker, Sir, I rise to oppose the Supplementary Demands. In Demand No. 10 there are two aspects. One is that a demand has been made for replenishing the furniture of Raj Bhavan. My Learned Friend Sri Gopala Gowa has characteristically spoken about it and he has said how it is not necessary to replenish the furniture when so many other important works are not being undertaken in the State. My Congress friends always say that there must be economy and that people must lead a simple life. I do not want to dilate upon that.

The second is there is a Demand in respect of State Vigilance Commission. This Commission is meant for seeing that the corrupt practices, etc., which are there are put an end to and that there is proper administration in our State. Previously, there was the Anti-Corruption Department. Now they call it Vigilance Commission and have given to it slightly more powers, but it is my experience that there are lot of complaints against it. This Vigilance Commission is not having as much power as it should have and is in no way better than the Anti-Corruption Department which we had earlier. In this connection, I would like to draw your attention, Sir, to a particular incident which has come to my

(SRI M. S. KRISHNAN)

notice. It appears a complaint has also been sent to the Government. There is the Mysore Acetate. It is a firm wherein Government has its share and highly paid officers of the Department of Industries are there. This firm is having quite a lot of connection with a big firm in Bombay and the complaint is that they indented for machinery. The machinery supposed to be foreign machinery came to Mysore Acetate but then this machinery were all just junk and this junk was brought to the Mysore Acetate at the ex ense of the people because of the collusion of some high officers with that particular firm in Bombay. When this complaint was brought to the notice of the Government and to the notice of the Vigilance Commissioner himself, they pleaded inability. They said that they have no power to search particularly in a place outside the State and they asked what can they do when such power is not there. This is one instance of highly placed officials using their power in a corrupt manner. These allegations are there not only against the officers but also against the Ministers. When the Vigilance Commission cannot do its job, I do not understand why money should be given for purchase of cars, jeeps, etc., for them In fact, I would like the Vigilance Commission to be even more perfect than what it is One of their grievances is that they have no power. They have also not got even a proper place to conduct their affairs. They are now housed in the Multi-storeyed building, but that building has got ears and eyes also and it is stated by them that even from the point of secrecy it is necessary that they should be housed in a separate place. This is a matter which the Government should think of immediately. That is why I consider that this Demand is not justified.

2-30 P.M.

Demand No. 13 refers to Police administration and the creation of the post of Deputy Inspector-General of Police and other staff for Gulbarga area. About the Police administration, the less said the better. Before I speak about Police administration in general, I would like to point out that the money they want is for the creation of the post of D. I. G., and other staff in that area. To my knowledge, the Police are meant to see that the properties of the people are protected, murders, looters, if any, can hold on and people are safe from the hands of such people. But, then, particularly in Gulbarga, Raichur, Bijapur and other places, it is well known from the records that today the crimes are increasing, number of murders, number of thefts have been increasing, and I do not know what your Police Department is doing. Of course, the Home Minister has gone away and I do not know who is placed in charge of his duties. Sri Jatti, today stated that he is looking into the files of the Home Ministry You want to create a supervisory post, but you do not give strict instructions to the police to catch the culprits. We know what happened in the Chamarajanagar incident. Dogs came

and smelt and went away to Madras. The Madhugiri incident is already well known. The Kirloskar Company people were beaten recently in Bangalore not only the factory workers, but the innocent people of Bangalore were also beaten. The H. M. T. workers were beaten by the Police, just because they contacted the administration for bonus. In the Metal Lamp Caps factory, the workers were beaten by the Police. The proprietor of this factory is a very great man. It appears he has to pay Rs. 1,75,000 to the Bangalore Corporation and he is evading. You people have no guts to recover such a huge amount, because he has paid enough money to your party during elections The registration of a Trade Union under the present aeges of the Congress Government has beoome such a crime that the police are used to beat people, and still you want more money for Police department. I strongly oppose this demand.

Thirdly, I would like to refer to Demand No. 31. My friend has already referred to it. It is in regard to money to be given for the construction of "Five Star Hotel" in Bangalore. Where was the necessity for that, I do not understand

MR. SPEAKER.—Central Government is giving funds. If the suggestion is, "don't take that loan" that argument can be advanced.

SRI M S KRISHNAN.—The Central Government is there. Today, there is a demand by the Labour Department that the department must be housed in a particular place. There is a demand that all Courts must be housed in one place. But, we are not prepared to spend money for that purpose. There is another big hotel 'Hotel International' in Bangalore which is not doing good business. Under the circumstances, I do not see any wisdom in constructing the 'Five Star Hotel'.

Demand No. 34 pertains to Pension for political sufferers. It is for those people who have participated in the freedom movement. I am also one of those persons, but then, I consider this concession as abnoxious. What has happened is, all sorts of people are trying to get what is known all pension under the guise of political sufferer. The other day I was lodged in the Central Jail. There, I was asked by the officer about so many other things. This is how they are trying to get information. I consider that it is highly improper. I strongly oppose the demand.

MR. SPEAKER.—I will give the Ruling on Sri Nagappa's Point of Order.

SRI M. NAGAPPA.—Sir, before the Ruling is given, I would like to draw the attention of the Hon'ble Chair to A.I.R. 1955 Nagpur—page 11 (j), wherein it is stated that the provisions of Article 205 can be availed of only if the money already voted for is insufficient or for incurring a particular expenditure or some new service has been started. Where the memorandum accompanying the Budget clearly states that a 'New service' is already contemplated, Article 205 cannot come in and the provision for the expenditure has to be made in the original Budget itself.

Mr. SPEAKER—You please pass it on to me. I will deliver the Ruling later.

† ಶ್ರೀ ಶರಣಗೌಡ ಇನಾಮ್‌ದಾರ್ (ಜವರ್ಗಿ).—ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟಿನಲ್ಲಿ ಡಿಮಾಂಡ್ ನಂಬರ್ 54ರಲ್ಲಿ ಗುಲ್ಬರ್ಗ ಮಿಲ್ ಬಗ್ಗೆ 21 ಲಕ್ಷ ರೂಪಾಯಿಗಳನ್ನು ಕೇಳಿದ್ದೀರಿ. ಈ ಮಿಲ್ ಬಗ್ಗೆ ಹೇಳುವಾಗ ಕೈಗಾರಿಕೆ ಸಚಿವರು ಸಭೆಯಲ್ಲಿ ಇದ್ದರೆ ಚೆನ್ನಾಗಿತ್ತು. ಅವರು ಇಲ್ಲಿ ಇಲ್ಲ. ಈ ವಿಚಾರವನ್ನು ಯಾರ ಮುಂದೆ ಹೇಳಬೇಕೆಂದು ಗೊತ್ತಾಗುತ್ತಿಲ್ಲ, ಆರ್ಥಿಕ ಮಂತ್ರಿಗಳಿಗೂ ಕೈಗಾರಿಕೆ ಮಂತ್ರಿಗಳಿಗೂ ಸಂಬಂಧವಿಲ್ಲ. ಗುಲ್ಬರ್ಗ ಮಿಲ್ ಮೊದಲು ಖಾಸಗೀ ಮಿಲ್ಲಾಗಿತ್ತು. ಗೌರಿಬಿದನೂರ್ ಸಕ್ಕರೆ ಕಾರ್ಖಾನೆಗೆ ಮತ್ತು ದಾವಣಗೆರೆ ಟೆಕ್ಸ್‌ಟೈಲ್ ಮಿಲ್‌ಗೆ ಸರ್ಕಾರದವರು ಕೊಟ್ಟಿರುವಂತೆ ತಮಗೂ ಸಾಲ ಕೊಡಬೇಕೆಂದು ಈ ಮಿಲ್‌ನವರು ಕೇಳಿದರು. ಅದರಂತೆ ಸರ್ಕಾರದವರು 30 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟರು. ಪುನಃ ಆ ಹಣ ಸಾಲಲಿಲ್ಲವೆಂದು 70 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟರು. ಮತ್ತೊಂದು ಸಲ 30 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟರು. ಈ ಪ್ರಕಾರ ಸರ್ಕಾರದವರು ಆ ಕಾರ್ಖಾನೆಗೆ ಒಂದು ಕೋಟಿ 30 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟರು. ಸರ್ಕಾರದವರು ಇಷ್ಟೊಂದು ಸಾಲ ಕೊಡುವುದಕ್ಕೆ ಮೊದಲು ಆ ಮಿಲ್‌ನಲ್ಲಿ 3,600 ಜನ ಕೂಲಿಗಾರರು ಕೆಲಸ ಮಾಡುತ್ತಿದ್ದರು. ನೀವು ಸಾಲ ಕೊಡುತ್ತಾ ಹೋದಂತೆ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರ ಸಂಖ್ಯೆ ಕಡಿಮೆಯಾಗುತ್ತಾ ಬಂತು. ಈಗ ಗಿರಣಿ ಮುಚ್ಚಲ್ಪಟ್ಟಿದೆ. ಈ ಖಾಸಗೀ ಗಿರಣಿಗೆ ಸಾಲ ಕೊಡುತ್ತಾ ಬಂದು ಕೊನೆಗೆ ಆ ಗಿರಣಿಯನ್ನೇ ತಮ್ಮ ವಶಕ್ಕೆ ತೆಗೆದುಕೊಂಡಿರಿ. ಖಾಸಗೀ ವಶದಲ್ಲಿಯೇ ಇದ್ದರೆ ಚೆನ್ನಾಗಿ ನಡೆಯುತ್ತಿತ್ತು. ನಿಮ್ಮ ವಶಕ್ಕೆ ತೆಗೆದುಕೊಂಡಮೇಲೆ, ಆ ಮಿಲ್ಲಿನ ಆಡಳಿತ ನೋಡಿಕೊಳ್ಳಲು ಶೇಷಾದ್ರಿ ಸಾಹೇಬರನ್ನು ನೇಮಿಸಿದಿರಿ. ನಂತರ ಅವರನ್ನು ಟೆಕ್ಸ್‌ಟೈಲ್ ಬಗ್ಗೆ ಚೆನ್ನಾಗಿ ತಿಳಿದುಕೊಂಡು ಬರಲಿ ಎಂದು ವಿದೇಶಗಳಿಗೆ ಕಳಿಸಿದಿರಿ.

[Mr. Chairman (Sri S. D. Kothavale) in the Chair.]

ಅವರನ್ನು ಅಲ್ಲಿಗೆ ಕಳಿಸುವುದಕ್ಕಾಗಿ ನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಿದರು. ಅವರು ಮರಳಿ ಬಂದಮೇಲೆ ಅವರನ್ನು ಅಲ್ಲಿಯೇ ಇಡದೆ ಡೆಪ್ಯುಟಿ ಕಮಿಷನರ್ ಎಂದು ಬೇರೆ ಕಡೆ ಕಳಿಸಿದರು. ಇಲ್ಲಿ ಮಾತ್ರ ಟೆಕ್ನಾಲಜಿ ಗೊತ್ತಿಲ್ಲದಂಥವರನ್ನು ತಂದು ಕೂಡಿಸಿದರು. ಹಾಗಾದರೆ ಅವರನ್ನು ಫಾರೆನ್ನಿಗೆ ಕಳಿಸುವ ಅವಶ್ಯಕತೆ ಏನು ಇದ್ದಿತು ? ಅಂಥ ಅನುಭವ ಇದ್ದವರನ್ನು ಡೆಪ್ಯುಟಿ ಕಮಿಷನರ್ ಮಾಡಿ ಬೇರೆ ಕಡೆ ಹಾಕಿ ಇಲ್ಲಿ ಮಾತ್ರ ಟೆಕ್ಸ್‌ಟೈಲ್ ಅಂದರೇನು ಇಂಡಸ್ಟ್ರೀ ಅಂದರೇನು ಅರಳೆ ಬಟ್ಟೆ ಅಂದರೇನು ಎನ್ನುವದು ಯಾವುದೂ ಗೊತ್ತಿಲ್ಲದವರನ್ನು ಹಾಕುವುದು ಇದೇನು ತಮಾಷೆ ಮಾಡುತ್ತಾ ಇದ್ದೀರಾ? ಇದನ್ನು ನೋಡಿದರೆ ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ಗೆ ರೊಕ್ಕ ಕೊಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ಆಮೇಲೆ ಈ ಗಿರಣಿ ಬಂದ ಮಾಡಿದರು. ಆಗಿನ ಆಡ್ಮಿನಿಸ್ಟ್ರೇಟರರು ವರ್ಕಿಂಗ್ ಕ್ಯಾಪಿಟಲ್ ಸಲುವಾಗಿ 30 ಲಕ್ಷ ರೂಪಾಯಿ ಕೊಟ್ಟಿದ್ದಾದರೆ ಗಿರಣಿ ನಡೆಯುತ್ತದೆ ಎಂದು ಹೇಳಿದರೂ ಕೂಡ ಸರಕಾರ ನಿರ್ಣಯ ತೆಗೆದುಕೊಂಡು ದುಡ್ಡು ಕೊಡುವುದು ಬೇಡ, ದುಡ್ಡು ಕೊಟ್ಟದ್ದು ತಿರುಗಿ ಬರುವುದಿಲ್ಲ ಎಂದು ಹೇಳಿ ಗಿರಣಿ ಬಂದು ಮಾಡಿದರು. ಅನಂತರ ಸರಕಾರ 21 ಲಕ್ಷ ರೂಪಾಯಿ ಕಾಂಪೆನ್‌ಸೇಷನ ಫಾರ್ ರಟ್ರೆಂಚಮೆಂಟ್ ಕೊಟ್ಟರು. ಒಂದೂವರೆ ಕೋಟಿ ರೂಪಾಯಿ ಬಂಡವಾಳ ಹಾಕಿದ ಈ ಗಿರಣಿಗೆ ಇನ್ನೊಂದು 30 ಲಕ್ಷ ರೂಪಾಯಿ ಕೊಟ್ಟು ಸರಿಯಾಗಿ ನಡೆಯುವಂತೆ ಮಾಡಿದ್ದರೆ ಅಲ್ಲಿ ಕೆಲಸ ಮಾಡುವ 15 ಸಾವಿರ ಜನ ಬದುಕಿಕೊಳ್ಳುತ್ತಿದ್ದರು. ಗಿರಣಿ ಸಾಮಾನುಗಳನ್ನು ಯಾರೋ ಮಾರಿಕೊಂಡು ತಿನ್ನುತ್ತಿದ್ದಾರೆ, ಕಾಯುವುದಕ್ಕೆ ದಿಕ್ಕಿಲ್ಲದಂತಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೋ ? ನಿಮಗೆ ಗೊತ್ತಾಗಿಲ್ಲವೇ ? 30 ಲಕ್ಷ ರೂಪಾಯಿ ವರ್ಕಿಂಗ್ ಕ್ಯಾಪಿಟಲ್ ಕೊಡದೆ ಹದಿನೈದು ಸಾವಿರ ಜನರನ್ನು ಅನ್ನಾನ್ನ ಗತಿ ಮಾಡಿ ನಿರಾಶ್ರಿತರನ್ನಾಗಿ ಮಾಡಿದ್ದೀರಿ ಇದು ನಾಚಿಕೆಗೇಡು ಮಾತು ಎಂಬುದು ಸರಕಾರಕ್ಕೆ ತಿಳಿಯಬೇಕು. ಈ ಗಿರಣಿಯನ್ನು ಮೇ ಜೂನ್ ತಿಂಗಳಿನಲ್ಲಿ ಬಂದು ಮಾಡಿದಿರಿ. ಕಳೆದ ಬಜೆಟ್ ಸೆಶನ್ನಿನಲ್ಲಿ ನಾವು ಸಾಕಷ್ಟು ಮಾತನಾಡಿ ಹೇಳಿದ್ದೇವೆ. ಆದರೂ ಕೂಡ ಬಂದ್ ಮಾಡಿದಿರಿ. ಈಗ ಮಾಡುವುದನ್ನು ಆಗಲೇ ಮಾಡಿದ್ದರೆ ಜನರಿಗೆ ಒಳ್ಳೆಯದಾಗುತ್ತಿತ್ತು. ಈಗ ನಾವು ಇದಕ್ಕೆ ದುಡ್ಡು ಕೊಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ಒಂದು ವೇಳೆ ನೀವು ಜಬರದಸ್ತಿಯಿಂದ ಹಣ ತೆಗೆದುಕೊಂಡರೆ ಸರಕಾರ ದಿವಾಳಿ ತೆಗೆಯುತ್ತದೆ. ನಿಮ್ಮ ಮುಂದಿನ ಭವಿಷ್ಯ ಕತ್ತಲೆಯಾಗಿದೆ. ಇದಲ್ಲದೆ ಕಳೆದ ಹತ್ತು ವರ್ಷಗಳ ಅನುಭವದಿಂದ ಕೂಡ ನಿಮಗೆ ಪ್ರೊಕ್ಯೂರ್‌ಮೆಂಟ್, ಡಿಸ್ಟ್ರಿಬ್ಯೂಷನ್ ಫುಡ್ ಕಂಟ್ರೋಲ್ ತೆಗೆದುಹಾಕುವುದು ನಿಮ್ಮ ತಲೆಯಲ್ಲಿ

ಬರುವುದಿಲ್ಲ. ಮೊದಲು ಪ್ರೊಹಿಬಿಷನ್ ಮಾಡಿ ಅನುಭವದ ನಂತರ ಪುನಃ ಅದನ್ನು ತೆಗೆದು ಹಾಕಲು ಬರುತ್ತದೆ ಆದರೆ ಫುಡ್ ಕಂಟ್ರೋಲ್ ದೇಶದ ಹಿತದೃಷ್ಟಿಯಿಂದ ತೆಗೆದುಹಾಕುವುದಕ್ಕೆ ಆಗಿಲ್ಲ. ತೆಗೆದು ಹಾಕುವುದರಿಂದ ಇದರಲ್ಲಿ ದೇಶದ ಹಿತದೃಷ್ಟಿ ಇದೆ ಎಂದು ಗೊತ್ತು ಇದ್ದರೂ ಕೂಡ ಏತಕ್ಕೆ ತೆಗೆಯುವುದಿಲ್ಲ? ಇದನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಿಲ್ಲ. ಪೋಲೀಸರ ಸಹಕಾರದಿಂದ ಬಾರ್ಡರಿನಲ್ಲಿ ಸ್ಮಗ್ಲಿಂಗ್ ಮಾಡುವುದಕ್ಕೆ ಸಹಾಯಕವಾಗಿರುವಂಥ ಜನರು ಅಧಿಕಾರಿಗಳನ್ನು ಇಟ್ಟಿರುವುದರಿಂದ ದೇಶದಲ್ಲಿ ಕರಪ್ಷನ್ ನಡೆಯುತ್ತಿದೆ. ಬೇರೆ ರೀತಿಯಿಂದ ಕರಪ್ಷನ್ನಿಗೆ ಅನುಕೂಲವಾಗುತ್ತಿದೆ. ಸ್ಮಗ್ಲಿಂಗ್ ಮಾಡುವುದಕ್ಕೆ ಸಹಾಯಕರಾದಂಥ ಅಧಿಕಾರಿಗಳನ್ನು ಬೇರೆ ಕಡೆ ಟ್ರಾನ್ಸಫರ್ ಮಾಡುವುದಿಲ್ಲ. ಬಡವನಿಗೆ ಬೇಕಾಗುವಂಥ ಜೀವನಾವಶ್ಯಕ ವಸ್ತುಗಳಾದ ಜೋಳ, ಎಣ್ಣೆ, ಬೇಳೆ, ಮೆಣಶಿನಕಾಯಿ ಇವುಗಳ ಧಾರಣೆ ಮಾರ್ಕೆಟ್ಟಿನಲ್ಲಿ ಏನು ಇದೆ ನಿಮಗೆ ಗೊತ್ತಿದೆಯೇ? 240 ರೂಪಾಯಿಗೆ ಬೆಲ್ಲ, ಮೆಣಶಿನಕಾಯಿ 284 ರೂಪಾಯಿ, ನಾಲ್ಕು ರೂಪಾಯಿಗೆ ಒಂದು ಕೆ.ಜಿ. ಎಣ್ಣೆ ಇವೆ. ರೈತರಿಂದ ಒಂದು ಕ್ವಿಂಟಾಲ್ ಜೋಳವನ್ನು 54 ರೂಪಾಯಿಗೆ ತೆಗೆದುಕೊಂಡು ನೀವು 72 ರೂಪಾಯಿಗೆ ಕೊಡುತ್ತಾ ಇದ್ದೀರಿ. 54 ರೂಪಾಯಿ ಮೇಲೆ 18 ರೂಪಾಯಿ ಚಾರ್ಜು ಮಾಡುತ್ತೀರಿ. ವ್ಯಾಪಾರಸ್ಥರು ಒಂದು ಕ್ವಿಂಟಾಲ್ ಜೋಳಕ್ಕೆ ನಾಲ್ಕೈದು ರೂಪಾಯಿಗಿಂತ ಹೆಚ್ಚಿಗೆ ಲಾಭ ತೆಗೆದುಕೊಳ್ಳುವುದಿಲ್ಲ. ಆದರೆ ನೀವು ಒಂದು ಕ್ವಿಂಟಾಲಿಗೆ 18 ರೂಪಾಯಿ ಹೆಚ್ಚಿಗೆ ಚಾರ್ಜು ಮಾಡಿ ಕೊಡುತ್ತಿದ್ದೀರಿ. ನಿಮಗೆ ವ್ಯವಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿಯೇ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಧಾನ್ಯ ಸಾಗಾಣಿಕೆಗೆ ಬಂದಿ ಹಾಕಿ ದೇಶದಲ್ಲಿ ಸ್ಕೇರ್ಸಿಟಿ ಉಂಟು ಮಾಡಿ ಜನರಿಗೆ ತೊಂದರೆಯುಂಟು ಮಾಡುತ್ತಿದ್ದೀರಿ. ಗುಲಬರ್ಗ ಜೋಳ, ವಿಜಾಪೂರ ಜೋಳ ನಮ್ಮ ರಾಜ್ಯದಲ್ಲಿಯೇ ಬೇರೆ ಜಿಲ್ಲೆಗೆ ತರುವುದಕ್ಕೆ ಆತಂಕವನ್ನುಂಟುಮಾಡುತ್ತಿದ್ದೀರಿ. ನಿಮಗೆ ಬೇಕಾದರೆ, ನಿಮಗೆ ಬೇಕಾದಂಥ ಜನರಿಗೆ, ಮಾತ್ರ ಪರ್ಮಿಟ್ ಕೊಟ್ಟು ಲಾಭ ಮಾಡಿಕೊಳ್ಳುವಂತೆ ಮಾಡುತ್ತಿದ್ದೀರಿ. ಸಾಮಾನ್ಯ ಜನರಿಗೆ ಧಾನ್ಯ ಬೆಳೆಯತಕ್ಕಂಥ ಜನರಿಗೆ ಲಾಭ ಮಾಡುತ್ತಾ ಇಲ್ಲ. ನಮ್ಮ ಫುಡ್ ಮಿನಿಸ್ಟರ್ ಅವರು ಈಗ ಸಭೆಯಲ್ಲಿ ಹಾಜರ್ ಇಲ್ಲ. ನಾವು ಯಾರಿಗೆ ಹೇಳೋಣ? ಗುಲಬರ್ಗ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಫುಡ್ ಅಡ್ವೈಜರಿ ಕಮಿಟಿ ಎಂದು ಮಾಡಿದ್ದೀರಿ. ಅವರನ್ನು ಕನ್ಸಲ್ಟ್ ಮಾಡದೇ ಹಾದಿಯಲ್ಲಿ ತಿರುಗಾಡತಕ್ಕಂಥ ಮನುಷ್ಯರ ಕೂಡ ಇನ್‌ಕನ್‌ಸಿಸ್ಟೆಂಟ್ ಆಗಿ ವಿಚಾರ ಮಾಡಿ ಹೊರಗೆ ಬರತಕ್ಕಂಥ ಜೋಳವನ್ನು ಬಂದೀ ಮಾಡುವುದಕ್ಕೆ ಆಗಿಲ್ಲ. ಅಲ್ಲಿ ನೀವು ಮಾಡತಕ್ಕಂಥದ್ದು ಸರಿಯಲ್ಲ, ಇದನ್ನು ಯಾರಿಗೆ ಕೇಳಬೇಕು ಎಂಬುದು ನಿಮಗೆ ಗೊತ್ತಿಲ್ಲ. ಅಧಿಕಾರಿಗಳು ಕರಪ್ಟ್ ಆಗಿದ್ದಾರೆ. ಅಂಥವರ ಮಾತು ಕೇಳಿ ನೀವು ಆರ್ಡರ್ ಮಾಡುತ್ತೀರಿ. ಇದರಿಂದ ಜನತೆಗೆ ಹೆಚ್ಚು ತೊಂದರೆಯಾಗಿದೆ. ದೇಶದ ಹಿತದೃಷ್ಟಿಯಿಂದ ಸಾಮಾನ್ಯ ಜನರ ಹಿತದೃಷ್ಟಿಯಿಂದ ಈ ಕಂಟ್ರೋಲ್ ತೆಗೆದುಹಾಕಿ ಎಂದು ಹೇಳುತ್ತೇನೆ. ಕಂಟ್ರೋಲ್ ತೆಗೆದರೆ ಜನ ಸಾಯುವುದಿಲ್ಲ. ಕಂಟ್ರೋಲ್ ಹೀಗೆ ಮುಂದುವರಿಸಿಕೊಂಡು ಹೋದರೆ ಸಾಮಾನ್ಯ ಜನರು ಸಾಯುತ್ತಾರೆ. ನಮ್ಮ ಮಾತು ನೀವು ಕೇಳುವುದಿಲ್ಲ. ಒಮ್ಮೆ ಧೈರ್ಯದಿಂದ ಪ್ರೊಹಿಬಿಷನ್ ಹೇಗೆ ತೆಗೆದುಹಾಕಿದಿರೋ ಹಾಗೆಯೇ ಧೈರ್ಯ ಮಾಡಿ ಕಂಟ್ರೋಲ್ ತೆಗೆದುಹಾಕಿ ಎಂದು ಹೇಳುತ್ತೇನೆ. ಸಕ್ಕರೆ ಕಂಟ್ರೋಲ್ ಇದ್ದಾಗ್ಗೆ ಎಲ್ಲರಿಗೂ ಒಂದು ಬೆಲೆಗೆ ಸಕ್ಕರೆ ಸಿಕ್ಕುತ್ತಿತ್ತು. ಈಗ ಪಾರ್ಶಲ್ ಕಂಟ್ರೋಲ್ ಮಾಡಿದ ಮೇಲೆ ಒಂದು ಕೇಜಿ ಸಕ್ಕರೆಗೆ ಐದು ರೂಪಾಯಿ ಬೆಲೆ ಆಗಿದೆ. ಆಹಾರ ಸಚಿವರು ಒಂದು ಸಲ ಹೇಳಿದರು ಬ್ಲಾಕ್ ಮಾರ್ಕೆಟ್ ಹೋಗಿ ಇನ್ನು ಮುಂದೆ ವೈಟ್ ಮಾರ್ಕೆಟ್ ಬರುತ್ತದೆ ಎಂದು ಹೇಳಿದರು. ವೈಟ್ ಮಾರ್ಕೆಟ್ ಅಂದರೆ ಏನು? ವೈಟ್ ಅಂದರೆ ಕಾಂಗ್ರೆಸ್ಸಿನವರು ವೈಟ್ ಕ್ಯಾಪ್ ಹಾಕುತ್ತಾರೆ ಅದೇ ಇರಬೇಕು, ವೈಟ್ ಕ್ಯಾಪ್ ಹೊರತು ಅವರಲ್ಲಿ ಬೇರೆ ಏನೂ ಕಾಣುವುದಿಲ್ಲ. ನಮ್ಮ ಮುಂದೆ ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಇಟ್ಟಿದ್ದಾರೆ. ಇದೊಂದೇ ಸಪ್ಲಿಮೆಂಟರಿ ಡಿಮಾಂಡ್ಸ್ ಅಲ. ಇನ್ನೂ ಎರಡು ಮೂರು ಕಾಪೀಸ್ ನಮಗೆ ತಂದು ಕೊಟ್ಟಿದ್ದಾರೆ. ಇನ್ನೂ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬರುತ್ತವೆ. This is the second list of supplementary demands. There may be 3 or 4 supplementary demands. This Government is spending without any return. I do not think there is any justification in it.

†Sri M. SRINIVAS NAYAK (Mangalore). I welcome the supplementary estimates for 1967-68 placed before the Hon'ble House by the Minister for Finance. Supplementary estimates that are coming up before the Legislature, are an annual feature. It is common knowledge that when budget is passed, supplementary estimates do come before

(SRI M. SRINIVAS NAYAK)

the House for supplementary grants. Accordingly the Hon'ble Finance Minister placed before the House supplementary budget which is for concurrence and sanction by this House.

First of all, I must congratulate the Government for the very good work that it has done. For instance, sales tax: nearly 5 years ago, the income was Rs. 11 crores. What is the income that the Government is getting today? It is getting nearly Rs. 30 crores by way of sales tax return in the State. That only shows how the Government has worked to plug loopholes and collect sales tax. The Government has done very well and needs to be congratulated on that score. Regarding food, the Members may take this opportunity to offer their own criticism. But if you look dispassionately and take into consideration the food that is available in the State and in the rural areas, you find that people are happy. We can say the scarcity that is created, if at all, is only man made scarcity, but taking the general condition of the food situation in the State, I think we are above all difficulties and people are quite happy. If we take South Kanara for instance, the price of rice has not gone up. I may inform the Hon'ble Members that from South Kanara five quintals of rice are being smuggled everyday. In spite of that, the price of rice has not gone up. There is no cry from the people to control prices and make it available to common man as it were. Two years ago in Mangalore you might have read in the papers that there were jathas to the Deputy Commissioner's Office, and gheros were committed and the Deputy Commissioner was not allowed to come out of the office. He was being asked to start fair price shops and make available rice at fair price. This year I may tell with facts and figures that rice is available in South Kanara in plenty today and also rice is going out to Kerala. I do not think any scarcity has been created anywhere except in a few cases where scarcity might have occurred due to failure of rains. Taking the general condition and the general atmosphere in the whole State, the policy that has been pursued by the Government has been wholly appreciated and there is no panic or misapprehension with regard to food supply even in the coming year.

With regard to pension to be paid to freedom fighters, I think the Government should be congratulated for their action in this regard, Freedom struggle had been carried on by youths in those days. We can just imagine people around the age of 25 to 30 taking part in the struggle and I must say the Government have done well in granting pension to such freedom fighters who never expected such bounty from the Government or individuals and who never expected that Congress would come into power and the country would attain freedom. They jumped into the struggle at a time when there was no future for those people and they lost everything, even their wife and children; ladies lost their husbands. Such people are to be helped and I think it ought to have been done earlier. Anyway the Government has come

before this House to give pension to such people and I really congratulate the Government for bringing such a demand before the House. When sugar was decontrolled, fear was expressed that the price would rise high. Talking about my own place Mangalore, price of sugar which rose to Rs. 500, today it has come down to Rs. 400 and it is even coming down to Rs. 380. People expected that in the first week of January the price would go down to Rs. 300 per quintal. That only shows that the decision taken by the Government of India and implemented very fairly by the Government of Mysore is bearing fruit. For householders sugar is made available through co-operative societies or through fair price shops. Canteens, hotels, sweatmeat makers, confectioners and other bodies can obtain from open market. They have been obtaining sugar at very high rate then and they were paying Rs. 300 to Rs. 400 per quintal and such people are now asked to buy sugar in the open market. Today open market price is also coming down and I think none will have any complaint to make. As regards industries also, the Government have done well in trying to gear up the present industries and also bring in new industries into fruition. With regard to question of Mangalore, the Government have already arranged to have a fertiliser factory in Mangalore. Everywhere the Government have been giving impetus to industries and trying to gear up industries in the State. I commend Hon'ble Members of this House to pass the supplementary estimate with one voice because estimates that have come before the House for sanction are very essential for the maintenance of the services of the State and also for giving a fair deal to the people of the State.

†ಶ್ರೀ ಜಿ. ದುಗ್ಗಪ್ಪ (ಭರಮಸಾಗರ).—ಮಾನ್ಯ ಸಭಾಪತಿಯವರೇ, ಮಾನ್ಯ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ.

ಈಗ ತಾನೇ ಆಳುವ ಪಕ್ಷದಿಂದ ಮಾತನಾಡಿದ ಮಾನ್ಯ ಸದಸ್ಯರು ಹೇಳಿರತಕ್ಕ ನೀತಿ, ಅವರು ಹೇಳಿರತಕ್ಕ ನಿರೂಪಣೆಯನ್ನು ನೋಡಿದರೆ ಹೊಟ್ಟೆ ತುಂಬಿದ ನೀತಿಯಾಗಿದೆ. ಇಂಥ ಹೊಟ್ಟೆ ತುಂಬಿದ ನೀತಿಯನ್ನು ಅವರು ಇಲ್ಲಿ ಹೇಳಿದರೇ ವಿನಾ ಅವರು ಹಳ್ಳಿಯ ಜನರ ಕಷ್ಟ ಕಾರ್ಪಣ್ಯಗಳನ್ನು ಕುರಿತು ಹೇಳಲಿಲ್ಲ. ಅವರು ಹಳ್ಳಿಗಳಿಗೆ ಬಂದು ನೋಡಲಿ. ಬೆಂಗಳೂರಿನಲ್ಲಿ ಸುಭಿಕ್ಷವಾಗಿದೆ ಎಂದರೆ ಮೈಸೂರು ದೇಶದ ಎಲ್ಲ ಕಡೆಯೂ ಹಾಗೆಯೇ ಇದೆ ಎಂದು ಭಾವಿಸಬಾರದು. ಚಿತ್ರದುರ್ಗ ಜಿಲ್ಲೆ, ತುಮಕೂರು ಜಿಲ್ಲೆ ಮತ್ತು ಇತರ ಕಡೆ ಬಂದು ನೋಡಲಿ, ಅಲ್ಲಿನ ಜನಗಳು ಎಷ್ಟು ಸುಭಿಕ್ಷವಾಗಿದ್ದಾರೆಂದು ಗೊತ್ತಾಗುತ್ತದೆ. ನಾಲ್ಕು ರೂಪಾಯಿ ಸಕ್ಕರೆಯನ್ನು ಕೊಂಡುಕೊಳ್ಳತಕ್ಕ ಶಕ್ತಿ ಇರುವ ಹೊಟ್ಟೆ ತುಂಬಿದ ಜನ ಹೇಳುವ ಮಾತು ಬಡ ಜನರಿಗೆ ಎಲ್ಲಿ ಹಿಡಿಸೀತು? ಇಂಥ ನೀತಿ ಸರ್ಕಾರದ್ದು.

ಸಾಮಾನ್ಯವಾಗಿ ಈ ಮಾನ್ಯ ಸಭೆಗೆ ಬಜೆಟ್ ಹೇಗೆ ತಯಾರು ಮಾಡುತ್ತಾರೆ ಎನ್ನುವುದು ಗೊತ್ತಿದೆ. ಬಜೆಟ್ಟನ್ನು ತಯಾರು ಮಾಡುವಾಗ ಅದಕ್ಕೆ ಒಂದು ಪ್ರೋಗ್ರಾಂ ಇದೆ, ಟೈಂ ಟೇಬಲ್ ಇದೆ. ಅದು ಸೆಪ್ಟೆಂಬರ್ ತಿಂಗಳಿನಿಂದ ಪ್ರಾರಂಭವಾಗುತ್ತದೆ. ಆಯಾ ಇಲಾಖಾ ಮುಖ್ಯಾಧಿಕಾರಿಗಳು ತಮ್ಮ ತಮ್ಮ ಇಲಾಖೆಗೆ ಬೇಕಾಗತಕ್ಕ ಖರ್ಚು ಬಾಬನ್ನು ಮುಂಚಿತವಾಗಿ ನಿಯೋಜಿತ ಮಾಡಿ ಕಳುಹಿಸಬೇಕು. ತಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಚೇರಮನರಾಗಿದ್ದಾಗ ಅದನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ. ಈ ಸಪ್ಲಿಮೆಂಟರಿ ಬೇಡಿಕೆಗಳನ್ನು ಸರ್ಕಾರದವರು ಸಭೆಯ ಮುಂದೆ ಇಟ್ಟಾಗ ಏನು ಎದ್ದು ಕಂಡುಬರುತ್ತದೆ ಎಂದರೆ ಹಣಕಾಸು ಇಲಾಖೆಯವರು ಹಾಕಿರತಕ್ಕ ನಿಯಮಗಳನ್ನು ನೇಮಕ ಹೊಂದಿರತಕ್ಕ ಮಂತ್ರಿಗಳಾಗಲಿ ಯಾರೇ ಆಗಲೀ ಅನುಸರಿಸದೆ ಅವರು ಆಸಕ್ತಿ ವಹಿಸಿ ಖರ್ಚು ಮಾಡತಕ್ಕ ಸಂದರ್ಭ ಏನೇನು ಬರುತ್ತದೆಯೋ ಆ ಪ್ರಕಾರ ಅವರು

(ಶ್ರೀ ಟಿ. ದುಗ್ಗಪ್ಪ)

ಮಾಡಿದ್ದಾರೆಯೇ ಹೊರತು ಯಾವೂ ನಿಬಂಧನೆಗಳನ್ನು ಅನುಸರಿಸಿಲ್ಲ. ಇದಕ್ಕೆ ನಾನು ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ, ಡಿಮಾಂಡ್ 44ರಲ್ಲಿ ಸುಮಾರು 74,80,000 ರೂಪಾಯಿಗಳನ್ನು ಕೇಳುತ್ತಿದ್ದಾರೆ. ಗದಗಿನ ಒಂದು ಸೊಸೈಟಿಗೆ ಸಂಬಂಧಪಟ್ಟ ಹಾಗೆ ಈ ಹಣ ಬೇಕಾಗಿದೆ ಎಂದು ಇಲಾಖೆಯ ಮಂತ್ರಿಗಳು ಹೇಳುತ್ತಾರೆ. ಬಜೆಟ್ಟನ್ನು ತಯಾರು ಮಾಡಿದ ಕಾಲಕ್ಕೆ ಅವರಿಗೆ ಜ್ಞಾಪಕ ಬರಲಿಲ್ಲ ಇದು. ಆದುದರಿಂದ ಈಗ ತಂದಿದ್ದೇವೆ, ಕಂಟಿಂಜೆಂಟ್ ದುಡ್ಡನ್ನು ಉಪಯೋಗ ಮಾಡಿದ್ದೇವೆ, ಈಗ ದುಡ್ಡನ್ನು ತೆಗೆದುಕೊಂಡು ಅವರಿಗೆ ಕೊಡುತ್ತೇವೆಂದು ಹೇಳುತ್ತಾರೆ.

3-00 P.M.

ಮಂತ್ರಿಗಳಿರುವುದೇಕೆ ಎಂದು ಅವರನ್ನು ಕೇಳುತ್ತೇನೆ. ರಾಜ್ಯಪಾಲರು ನಿಮ್ಮನ್ನು ನೇಮಕ ಮಾಡಿದ್ದಾರೆ,ನೀವು ಜನರ ಸೇವೆ ಮಾಡುವುದಕ್ಕೆ ಹಣ ಕೊಡುತ್ತಾರೆ. ಆದರೆ ನೀವು ನಿಮ್ಮ ಕರ್ತವ್ಯಲೋಪ ಮಾಡಿದ್ದೀರಿ ಎಂದು ಹೇಳಬಹುದು ನಿಮ್ಮ ಇಲಾಖೆ ಕೆಟ್ಟುಹೋಗಿದೆ, ಸರಿಯಾಗಿ ಕೆಲಸಮಾಡುತ್ತಿಲ್ಲ. ಅಧಿಕಾರಿಗಳಿಗೆ ನೀವು ಸಲಹೆ ಕೊಡುವಹಾಗೆ ನೀವು ನಡೆಯುತ್ತಿಲ್ಲ. ನಿಮಗೆ ಬೇಕಾದವರಿಗೆ ಸಹಾಯಮಾಡುವುದು, ಬೇಡದವರು ಬಂದಾಗ ಸಹಾಯ ಮಾಡದಿರುವುದು ಹೀಗೆಲ್ಲಾ ನಡೆಯುತ್ತಿದೆ. ಉದಾಹರಣೆಗೆ ಗದಗಿನಲ್ಲಿರುವ ಧಾರವಾಡ ಡಿಸ್ಟ್ರಿಕ್ಟ್ ಕೋಆಪರೇಟಿವ್ ಆಯಿಲ್‌ಸೀಡ್ಸ್ ಪ್ರೋಸೆಸಿಂಗ್ ಸೊಸೈಟಿ ಸ್ಥಾಪನೆಮಾಡಿದ್ದು ಶ್ರೀ ಕೆ. ಎಚ್. ಪಾಟೀಲರು. ಅವರು ಇಲ್ಲೇ ಇದ್ದಾರೆ. ಇದನ್ನು 1961 ರಲ್ಲಿ ಮಾಡಿ ಎಲ್.ಐ.ಸಿ. ನಿಂದ ಇಪ್ಪತ್ತೆರಡೂವರೆ ಲಕ್ಷ ರೂಪಾಯಿಗಳ ಸಾಲ ಪಡೆದಿದ್ದಾರೆ, ಮೆಷಿನರಿ ಸ್ಥಾಪನೆಮಾಡಿದರು. ಸರಕಾರ ಗ್ಯಾರಂಟಿ ಕೊಡಬೇಕೆಂದು ಕೇಳಿದರೆ ಸರಕಾರಕ್ಕೆ ಅವರು ಬೇಕಾಗಿರಲಿಲ್ಲವಾದ್ದರಿಂದ ಕೊಡಲಿಲ್ಲ. ಹೀಗಾಗಿ ಇದು ನಿಲ್ಲುವ ಸ್ಥಿತಿಗೆ ಬಂತು. ಇದನ್ನು ಕ್ಲೋಸ್ ಮಾಡಿದಮೇಲೆ ಸರಕಾರ ವಹಿಸಿಕೊಂಡಿತು. ಆಮೇಲೆ ಇದಕ್ಕೆ ಒಬ್ಬ ರಿಟೈರ್ಡ್ ಐ.ಎ.ಎಸ್. ಅಧಿಕಾರಿಯನ್ನು ನೇಮಕಮಾಡಿದರು. ಅವರು ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಡೆಪ್ಯುಟಿಕಮಿಷನರಾಗಿದ್ದಾಗ ಸರಕಾರದ ನೀತಿಯ ಪ್ರಕಾರ ಬಂಗಾರವನ್ನು ಎಲ್ಲರೂ ಸರಕಾರಕ್ಕೆ ಕೊಡಬೇಕೆಂದು ಕೇಳಿ ಅದನ್ನು ಶೇಖರಿಸಿದರು. ಆದರೆ ಒಬ್ಬರಿಗೂ ಆ ಬಗ್ಗೆ ರಸೀದಿ ಕೊಡಲಿಲ್ಲ. ಈ ಮಾನ್ಯ ಸಭೆಯಲ್ಲಿ ಅವರು ಬಹಳ ಲಂಚಕೋರರೆಂದು ಹೇಳಿದರು. ಅಂಥ ಲಂಚಕೋರರನ್ನು, ಅದಕ್ಷರಾದವರನ್ನು ಈ ದಿವಸ ತೆಗೆದುಕೊಂಡು ಹೋಗಿ ಗದಗಿನ ಸೊಸೈಟಿಯ ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ಮಾಡಿದ್ದಾರೆ. 44 ಲಕ್ಷ ರೂಪಾಯಿ ಮೆಹಿನರಿಯೇನಿತ್ತು ಅದಕ್ಕೆ ಇಂದು 66 ಲಕ್ಷ ರೂಪಾಯಿ ಬೆಲೆಯಾಗಿದೆ. ಇದಕ್ಕೆ ಯಾರು ಕಾರಣರು ? ಸಂಬಂಧಪಟ್ಟ ಮಂತ್ರಿಗಳೇ ಅಥವಾ ಯಾರು ಎಂಬುದನ್ನು ಉತ್ತರ ಕೊಡುವಾಗ ಹೇಳಬೇಕು. ಉತ್ತರ ಹೇಳದಿದ್ದರೆ ಸುಲಭವಾಗಿ ಬಿಡುವುದಿಲ್ಲ. ಅವ್ಯವಹಾರಿಕ ನೀತಿಯಿಂದ 44 ಲಕ್ಷವಿದ್ದುದನ್ನು 66 ಲಕ್ಷಕ್ಕೆ ಏರಿಸಿದ್ದಾರೆ. ಇದಕ್ಕಾಗಿ ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ. ಇದು ನಗುವ ಪ್ರಶ್ನೆಯಲ್ಲ. ಒಂದು ಪ್ರೈಮರಿ ಸ್ಕೂಲು ಬೇಕೆಂದರೆ, ಒಂದು ಇಂಟರ ವಿಲೇಜ್ ಕಮ್ಯೂನಿಕೇಷನ್ ರಸ್ತೆಯಾಗಬೇಕೆಂದರೆ, ಒಂದು ಕುಡಿಯುವ ನೀರಿನ ಬಾವಿ ಬೇಕೆಂದರೆ ಅವಕ್ಕೆ ಹಣವಿಲ್ಲವೆಂದು ಹೇಳುತ್ತಾರೆ. ದೇಶದಲ್ಲಿ ಎಷ್ಟೋ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ ಸಾಮಾನ್ಯ ಪ್ರಜೆಗಳಗೆ ಅತ್ಯಗತ್ಯವಾಗಿ ಒದಗಿಸಬೇಕಾದ ಸೌಲಭ್ಯ ಕುಡಿಯುವ ನೀರಿನ ಬಾವಿ ಕೇಳಿದರೆ ಅವಕ್ಕೆ ಲೋಕಲ್ ಕಾಂಟ್ರಿಬ್ಯೂಷನ್ ಬೇಕು ಎಂದು ಹೇಳುತ್ತಾರೆ, ಹರಿಜನರಿಗೆ ಕುಡಿಯುವ ನೀರಿನ ಬಾವಿ ಬೇಕೆಂದರೆ ಕಾಂಟ್ರಿಬ್ಯೂಷನ್ ಅದಕ್ಕೆ ಸಾರ್ವಜನಿಕರಿಂದ ಬೇಕು, ದಿನಬೆಳಗಾದರೆ ಒಂದು ರೂಪಾಯಿ ಕೂಲಿಮಾಡುವವರು ಕೆಲಸಮಾಡಿ ಬಾವಿ ತೆಗೆದರೆ ಆಮೇಲೆ ಸ್ವಲ್ಪ ಹಣ ಕೊಡುವ ನೀತಿಯಿದೆ. ನಿಮ್ಮ ನೀತಿ ಹೇಗಿದೆ ಎಂದರೆ ಒಂದು ಕಡೆ ಹಣವಿಲ್ಲವೆಂದು ಹೇಳುವುದು, ಇನ್ನೊಂದು ಕಡೆ ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನಿನಲ್ಲಿ ಸೂಪರ್ ಸ್ಕೇಲ್ ಫುಲ್‌ಟೈಂ ಆಫೀಸರನ್ನು ನೇಮಕಮಾಡುವುದು-ಹೀಗಿದೆ ಸರಕಾರದನೀತಿ, ಒಂದು ಡಿವಿಜನ್ನನ್ನು ಗುಲ್ಬರ್ಗದಲ್ಲಿ ಪ್ರಾರಂಭಿಸಿದ್ದಾರೆ, ಸೌತ್ ಸರ್ಕಲ್, ನಾರ್ತ್ ಸರ್ಕಲ್ ಎಂದು ಮಾಡಿದ್ದಾರೆ, ಇಂಜನಿಯರಿಂಗ್ ಇಲಾಖೆಗೆ ಬೇಕಾದಷ್ಟು ಖರ್ಚಾಗುತ್ತಿದೆ, ಆಫೀಸರುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಹೇಳುವುದೇ ಒಂದು ಮಾಡುವುದೇ ಒಂದು. ನಿಮಗೆ ಸಂಸ್ಥಾನದ ಹಣಕಾಸನ್ನು ಬೆಳೆಸುವ ರೀತಿ ನೀತಿ ಗೊತ್ತಿಲ್ಲ, ನಿಮ್ಮ ನೀತಿ ಅವ್ಯವಹಾರಿಕವಾಗಿದೆ. ಇದಕ್ಕೆ ಇನ್ನೊಂದು ಉದಾಹರಣೆಯಿದೆ. 5 ಸ್ಟಾರುಗಳ ಹೋಟಲನ್ನು ಮಾಡುವ ಯೋಚನೆ ಇದೆ.. ಇದರಲ್ಲೇನು ನೀತಿಯಿದೆ.? ಇನ್ನು ಪೋಲೀಸಿನ ನೀತಿ ವಿಚಾರ ಹೇಳಬೇಕಾಗಿದೆ ಈಗತಾನೆ

ಸಿದ್ಧವೀರಪ್ಪನವರು ಹೇಳಿದರು. ನಮ್ಮ ಜಿಲೆಯಲ್ಲಿ ಜಗಳೂರು ತಾಲ್ಲೂಕಿನಲ್ಲಿ ಒಬ್ಬ ಸಬ್‌ಇನ್‌ಸ್ಪೆಕ್ಟರಿದ್ದಾರೆ. ಇದೊಂದು ವಿಚಿತ್ರ ವಿಚಾರ ನಾನು ಹೇಳುತ್ತಿರುವುದು. ಇಂದು ಅಲ್ಲಿ ಪೋಲೀಸು ಠಾಣೆಗೆ ಯಾರಾದರೂ ವ್ಯಕ್ತಿ ದೂರು ಕೊಡಲು ಬಂದರೆ ಮೊದಲು ಅತನನ್ನು ಒದ್ದು ಲಾಕಪ್ಪಿಗೆ ಹಾಕುತಾರೆ, ಯಾರೇ ತಪ್ಪು ಮಾಡಿರಲಿ ಮೊದಲು ದೂರು ಕೊಡುವವರಿಗೆ ಶಿಕ್ಷೆಯಾಗುತ್ತದೆ. ಇದನ್ನು ಹೇಳಿದರೆ ವಿಚಾರಮಾಡುವವರೇ ಇಲ್ಲ. ಆ ಅಧಿಕಾರಿಯನ್ನು ಇಷ್ಟು ಸಡಿಲವಾಗಿ ಏಕೆ ಬಿಟ್ಟಿರುವುದು ಅಂದರೆ, ಆಡಳಿತದಲ್ಲಿ ಹಸ್ತಕ್ಷೇಪವಿದೆ, ತಮಗೆ ಬೇಕಾದ ಅಧಿಕಾರಿ ಇರಲಿ ಹೇಳಿದ ಹಾಗೆ ಕೇಳುತ್ತಾನೆ ಎಂದು ಆ ಅಧಿಕಾರಿ ವಿಚಾರದಲ್ಲಿ ಗಮನಕೊಡುತ್ತಿಲ್ಲ. ದಾವಣಗೆರೆಯಲ್ಲಿರುವ ಸಬ್‌ಇನ್‌ಸ್ಪೆಕ್ಟರನ್ನು ಎಷ್ಟು ಕಾಲವಾದರೂ ಬದಲಾಯಿಸುತ್ತಿಲ್ಲ ಐ. ಜಿ. ಪಿ. ಎಷ್ಟೋ ಸಲ ವರ್ಗಮಾಡಿದರೂ ಕೂಡ ಮುಖ್ಯಮಂತ್ರಿಗಳು ಮುಂತಾದವರಲ್ಲಿ ಯಾರ ಸಲಹೆಯಮೇಲೋ ಏನೋ ವರ್ಗಾವಣೆಯನ್ನು ವಜಾಮಾಡುತ್ತಿದ್ದಾರೆ. ಇದನ್ನು ನೋಡಿ ಸಹನೆ ಮೀರಿದೆ. ಅದನ್ನು ಜನರು ಕಳೆದುಕೊಳ್ಳುವುದಕ್ಕೆ ಮುಂಚೆ ಇರುವ ಲೋಪದೋಷಗಳನ್ನು ಸರಿಪಡಿಸದಿದ್ದರೆ ಜನರೇ ತಮ್ಮ ರಕ್ಷಣೆ ತಾವು ಮಾಡಿಕೊಳ್ಳಬೇಕಾದ ಕಾಲ ಬರಬಹುದು, ಇದಕ್ಕೆ ಅವಕಾಶ ಕೊಡಬೇಡಿ ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದಿರುವ ವಿಷಯದ ಬಗ್ಗೆ ಮಾತನಾಡುತ್ತಾ ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಈ ಚರ್ಜೆಯಲ್ಲಿ ಭಾಗವಹಿಸುವುದಕ್ಕೆ ಮುಂಚೆ ಆಹಾರ ವಿತರಣೆ ವಿಚಾರದಲ್ಲಿ ಪರಿಪೂರ್ಣತೆ ಹೊಂದುವ ಹಾಗೆ ಸರಕಾರ ವ್ಯವಸ್ಥೆಮಾಡಿಲ್ಲ. ಬಹಳ ಬಡವರಿಗೆ ಸರಿಯಾದ ರೀತಿಯಲ್ಲಿ ಆಹಾರದ ಹಂಚಿಕೆಯಾಗುತ್ತಿಲ್ಲ, ಇದನ್ನು ಗಮನಿಸಿ ಸುವ್ಯವಸ್ಥಿತವಾದ ವ್ಯವಸ್ಥೆ ಮಾಡಬೇಕು. ಈಗ ಅಭಾವದ ಕಾಲವಾಗಿರುವುದರಿಂದ ಕ್ಷಾಮ ನಿವಾರಣೆ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಇಂಜನಿಯರಿಂಗ್ ಇಲಾಖೆಯ ಮೂಲಕ ತೆಗೆದುಕೊಂಡು ತನ್ಮೂಲಕ ಅನ್ಯಾಯವಾಗದಿರುವಹಾಗೆ ಮಾಡಬೇಕು, ಕೆರೆ, ರಸ್ತೆ, ಬಾವಿ ಮುಂತಾದ ಕೆಲಸಗಳನ್ನು ತೆಗೆದುಕೊಂಡು ಜನರಿಗೆ ಕೂಲಿ ಸಿಕುವ ಹಾಗೆ ವ್ಯವಸ್ಥೆಮಾಡಬೇಕು ಎಂದು ಹೇಳುತ್ತೇನೆ. ಮಾಗಡಿಯಲ್ಲಿ ಕೆಂಪೇಗೌಡರ ಕಾಲದ ಹಳೆಯ ಕಛೇರಿ ಇದೆ, ಅದನ್ನು ಮಾರ್ಪಾಡುಮಾಡಬೇಕು, ಈ ಬಗ್ಗೆ 20 ವರ್ಷಗಳಿಂದ ಸಲಹೆಮಾಡಿದೆ, ಆದರೆ ಅಂದಾಜಾಗಿಲ್ಲ, ಶೀಘ್ರವಾಗಿ ಇದನ್ನು ಕಾರ್ಯರೂಪಕ್ಕೆ ತರಲು ಸರಕಾರ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು ಎಂದು ಹೇಳುತ್ತೇನೆ.

ಈಗ ನನ್ನ ಮಿತ್ರರಾದ ದುಗ್ಗಪ್ಪನವರು ಪೋಲಿಸ್ ವಿಷಯ ಹೇಳಿದರು. ನಾನು ಹೆಚ್ಚು ಹೇಳುವುದಿಲ್ಲ. ಸಂಸ್ಥಾನಾಮಳೆ ಪ್ರತಿ ತಾಲ್ಲೂಕಿನಲ್ಲೂ ಒಬ್ಬೊಬ್ಬ ಸಬ್-ಇನ್‌ಸ್ಪೆಕ್ಟರ ಹುದ್ದೆಯನ್ನು ರದ್ದು ಮಾಡಿ 2 ತಾಲ್ಲೂಕುಗಳಿಗೆ ಒಬ್ಬರನ್ನು ಹಾಕಿರುವುದರಿಂದ ಜನರ ದೂರಿಗೆ ತಕ್ಷಣ ಗಮನ ಕೊಟ್ಟು ಕೆಲಸಮಾಡಲು ಸಾಧ್ಯವಾಗದೆ ಕಳವು ಮುಂತಾದುವು ಹೆಚ್ಚಿವೆ ಅವನ್ನು ತಡೆಗಟ್ಟುವುದು ಕಷ್ಟವಾಗಿದೆ. ಇದನ್ನು ಹೋದ ಸಲವೇ ಹೇಳಿದ್ದೇನೆ. ಆದರೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇದಕ್ಕೆ ಹೆಚ್ಚು ಹಣ ಬೇಕಾಗಿಲ್ಲ. ಇದಕ್ಕೆ ಖರ್ಚುಮಾಡಿದರೆ ಜನರ ಭದ್ರತೆಗೆ ದೇಶದ ಭದ್ರತೆಗೆ ಅನುಕೂಲವಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಗಮನಕ್ಕೆ ತರುತ್ತೇನೆ.

ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅನೇಕ ಕಡೆ ಸ್ಕೂಲುಗಳು ಇಲ್ಲ, ನನ್ನ ತಾಲ್ಲೂಕಿನಲ್ಲಿ 70 ಗ್ರಾಮಗಳಿಗೆ ಸ್ಕೂಲು ಕಟ್ಟಡಗಳು ಇಲ್ಲ, ತಾವು ಕೊಡತಕ್ಕ ಒಂದು ಸಾವಿರ ರೂಪಾಯಿ ಒಂದು ಸ್ಕೂಲ್ ಕಟ್ಟಡಕ್ಕೆ ಸಾಲದು, ಮೊದಲು ಇದ್ದ ಪದ್ಧತಿಯನ್ನೇ ಜಾರಿಗೆ ತರಬೇಕು, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇರುವಾಗ ಉಪಾಧ್ಯಾಯರುಗಳಿಗೆ ಮತ್ತು ಮಕ್ಕಳು ಕೂಳಿತುಕೊಳ್ಳುವುದಕ್ಕೆ ಸ್ಥಳ ಇಲ್ಲದೇ ಗುಡಿ ಗೋಪುರಗಳಲ್ಲಿ, ಮರದ ಕೆಳಗೆ ಕುಳಿತು ವಿದ್ಯಾಭ್ಯಾಸ ನಡೆಯುತ್ತಾ ಇದೆ. ಕಟ್ಟಡ ಸಾಲದು, ಅದರ ಭದ್ರತೆಗೆ ಸರ್ಕಾರ ಹಣ ವೆಚ್ಚ ಮಾಡತಕ್ಕ ಒಂದು ಕಾರ್ಯಕ್ರಮವನ್ನು ಕೈಕೊಳ್ಳಬೇಕು.

ಫಾರೆಸ್ಟ್ ಇಲಾಖೆ ವಿಚಾರ. ದೇಶಾದ್ಯಂತ ಅರಣ್ಯ ಸಂಪತ್ತು ಕುಂಠಿತವಾಗುತ್ತಾ ಇದೆ. ಇದಕ್ಕೆ ಖರ್ಚು ಮಾಡತಕ್ಕ ಹಣ ಸರಿಯಾದ ರೀತಿಯಲ್ಲಿ ಇಲಾಖೆ ವ್ಯವಸ್ಥೆ ಮಾಡುತ್ತಿಲ್ಲ. ನನ್ನ ತಾಲ್ಲೂಕಿನಲ್ಲಿ ಸಾವನದುರ್ಗ ಫಾರೆಸ್ಟ್ ಅಂತ ಇದೆ, ಬಹಳ ಹೆಚ್ಚು ಹಣ ಪ್ರತಿ ಸಾರಿ ಅದಕ್ಕೆ ವಿಲೇ ಆಗುತ್ತಾ ಇದೆ. ಅದನ್ನು ಕಾಯತಕ್ಕ ಅಧಿಕಾರಿಗಳ ಸಂಖ್ಯೆ ಜಾಸ್ತಿ ಇದೆ, ಆದರೆ ಅದರಿಂದ ಬರತಕ್ಕ ವರಮಾನ ಕಡಿಮೆ ಇದೆ. ಎಲ್ಲಿನವರೆಗೆ ಅರಣ್ಯ ಅಭಿವೃದ್ಧಿಯಾಗುವುದಿಲ್ಲ ಅಲ್ಲಿನವರೆಗೂ ಮಳೆಬೆಳೆ ಬರುವುದಿಲ್ಲ ಎಂದು ಹಿರಿಯರ ನಾಣ್ನುಡಿ ಇದೆ. ಆದ್ದರಿಂದ ಎಲ್ಲಿ ಫಾರೆಸ್ಟ್ ಇದೆ ಅದನ್ನು ಸುಭದ್ರಗೊಳಿಸಿ ದೇಶದ ಜನರಿಗೆ ಅನುಕೂಲವಾಗುವ ಹಾಗೆ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಹುಳಿಹಣ್ಣಿನ ಮರಗಳು ಎಲ್ಲೂ ಇಲ್ಲ. ಆದ್ದರಿಂದಲೇ ಹುಳಿಹಣ್ಣಿನ ಬೆಲೆ ಜಾಸ್ತಿ

(ಶ್ರೀ ಸೋಲೂರು ಸಿದ್ದಪ್ಪ)

ಯಾಗಿದೆ, ಅದು ಬಡವರಿಗೆ ಸಿಕ್ಕುವುದು ಬಹಳ ದುರ್ಲಭವಾಗಿದೆ. ಆದ್ದರಿಂದ ಫಾರೆಸ್ಟ್ ಇಲಾಖೆಯನ್ನು ಸುಭ್ರಗೊಳಿಸುವುದರಿಂದ ಸರ್ಕಾರದವರಿಗೂ ಲಾಭವುಂಟು, ದೇಶಕ್ಕೂ ಪ್ರಯೋಜನವುಂಟು ಮಳೆಬೆಳೆಗಳಿಗೂ ಅನುಕೂಲವಾಗುತ್ತದೆ ಎಂದು ಹೇಳುತ್ತಾ ಇದ್ದೇನೆ.

ಮಾಗಡಿ ತಾಲ್ಲೂಕಿನಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟು ಆಗಬೇಕೆಂದು ಕೇಳುತ್ತಿದ್ದೇವೆ. ಟಿ. ಎನ್. ಮಲ್ಲಪ್ಪನವರ ಕಾಲದಲ್ಲೇ ಅಲ್ಲಿ ಒಂದು ಕೋರ್ಟು ಆಗಬೇಕೆಂದು ತೀರ್ಮಾನ ಮಾಡಿದ್ದರು, ಅನೇಕ ಸಾರಿ ಚೀಫ್ ಮಿನಿಸ್ಟರಿಗೂ, ಮತ್ತು ನ್ಯಾಯಾಂಗ ಇಲಾಖೆಗೂ ಬರೆದರೂ ಕೂಡ ಇನ್ನೂವರೆಗೂ ಆಗಿಲ್ಲ. ಲ್ಯಾಂಡ್ ರಿಫಾರಂಸ್ ಕಮಿಟಿ ಶಿಫಾರಸಿನ ಪ್ರಕಾರ ಒಂದು ಕೋರ್ಟನ್ನು ರಾಮನಗರಕ್ಕೆ ಹಾಕಿದ್ದಾರೆ ಅಲ್ಲಿರತಕ್ಕ 7 ತಾಲ್ಲೂಕುಗಳನ್ನು ಒಳಗೊಂಡಿರುವಂತೆ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ರೈತರು ಕುಳಿತುಕೊಳ್ಳುವುದಕ್ಕೆ ಸ್ಥಳ ಇಲ್ಲ, ಮತ್ತು ಹೋಗಿ ಬರುವುದಕ್ಕೆ ಸೌಕರ್ಯ ಇಲ್ಲ, ಈ ರೀತಿ ಮಾಡಬಾರದು. ಮಾಗಡಿ ತಾಲ್ಲೂಕಿನ ಜ್ಯುಡಿಷಿಯಲ್ ಮತ್ತು ನ್ಯಾಯಾಂಗದ ವಿಚಾರದಲ್ಲಿ ಕೋರ್ಟ್ ಈಗ ಬೆಂಗಳೂರಿನಲ್ಲೇ ಮಾಡಿದ್ದಾರೆ. ಅದರಂತೆ ಟ್ರಿಬ್ಯೂನಲ್ ಕೋರ್ಟನ್ನೂ ಕೂಡ ಬೆಂಗಳೂರಿಗೆ ಕೊಟ್ಟು ಜನರಿಗೆ ಉಂಟಾಗಿರತಕ್ಕ ಕಷ್ಟವನ್ನು ಶಾಂತಗೊಳಿಸಬೇಕು. ಇದನ್ನು ಚೀಫ್ ಮಿನಿಸ್ಟರ ಹತ್ತಿರವೂ ಕೂಡ ಹೇಳಿದ್ದೇನೆ. ಈ ಒಂದು ಕೆಲಸವನ್ನು ತ್ವರಿತವಾಗಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೈಗಾರಿಕೆಗಳ ವಿಚಾರ. ಕೈಗಾರಿಕೆಗಳನ್ನು ಬೆಂಗಳೂರು ಪಟ್ಟಣದಲ್ಲೇ ಹೆಚ್ಚು ಹೆಚ್ಚಾಗಿ ಮಾಡುವುದರಿಂದ ಕೈಗಾರಿಕೆಗಳ ಸಂಬಂಧದಲ್ಲಿ ಉಂಟಾಗತಕ್ಕ ಗಲಭೆಗಳನ್ನು ನಿವಾರಣೆ ಮಾಡುವುದಕ್ಕೆ ತುಂಬಾ ಕಷ್ಟವಾಗಿದೆ. ಗ್ರಾಮಾಂತರದಲ್ಲಿ ತಂಬಾ ಬಡತನ ಇರುವುದರಿಂದ ಸರ್ಕಾರದವರು ಕೈಗಾರಿಕೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಅಲ್ಲಿ ಸಿಕ್ಕತಕ್ಕ ಸೌಲಭ್ಯಗಳಿಗೆ, ಅನುಕೂಲವಾದಂತೆ ಸ್ಥಾಪನೆ ಮಾಡುವುದರ ಮೂಲಕ ಜನತೆಗೆ ಸುಖವನ್ನುಂಟುಮಾಡುವುದಕ್ಕೆ ತಾವು ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಎಲ್ಲಾ ಕೈಗಾರಿಕೆಗಳೂ ಬೆಂಗಳೂರಿನಲ್ಲೇ ಕೇಂದ್ರೀಕೃತವಾಗುವುದರಿಂದ ಬಡಬಗ್ಗರು ಮುಂದುವರಿಯುವುದಕ್ಕೆ ಅವಕಾಶವಾಗುವುದಿಲ್ಲ, ಅಲ್ಲದೇ ಗ್ರಾಮಾಂತರದ ಜನರು ಇಲ್ಲಿಗೆ ವಲಸೆ ಬಂದು ಅಲ್ಲಿ ವ್ಯವಸಾಯಕ್ಕೆ ತುಂಬಾ ಕಷ್ಟವಾಗುತ್ತಾ ಇದೆ. ಇದನ್ನು ನಾನು ಅನೇಕ ಸಾರಿ ಹೇಳಿದ್ದೇನೆ. ಆದರೂ ಸರ್ಕಾರದವರೂ ಈ ಬಗ್ಗೆ ಆಲೋಚನೆ ಮಾಡಿಲ್ಲ. ನಾವು ಇಲ್ಲಿ ಹೇಳುವ ಒಂದೆರಡು ಕೆಲಸಗಳನ್ನಾದರೂ ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕು.

ಇನ್ನು ಡಾಕ್ಟರುಗಳ ವಿಚಾರ. ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ, ನಮ್ಮಲ್ಲಿ ತಯಾರಾದಂತಹ ಅನೇಕ ಡಾಕ್ಟರುಗಳು ಪರದೇಶಗಳಿಗೆ ಹೋಗತಕ್ಕ ಪದ್ಧತಿ ಇದೆ. ಅಂತಹವರು ಮತ್ತೆ ವಾಪಸು ಬರುವುದಿಲ್ಲ. ಕಾರಣ ಅಲ್ಲಿ ಹೆಚ್ಚು ವೇತನ ಸಿಕ್ಕುತ್ತದೆ. ಹತ್ತು ವರ್ಷವಾದರೂ ಇಲ್ಲಿ ವ್ಯಾಸಂಗಮಾಡಿದಂತಹವರು ಇಲ್ಲಿನ ಜನರಿಗೆ ಅನುಕೂಲ ಮಾಡಿದ ನಂತರ ಪಾಶ್ಚಿಮಾತ್ಯ ದೇಶಗಳಿಗೆ ಹೋಗಲು ಅವಕಾಶ ಕೊಡಲಾಗುತ್ತದೆ ಎಂಬ ಒಂದು ಕಂಡೀಷನ್ ಹಾಕಿದರೆ ಅನುಕೂಲವಾಗುತ್ತದೆ ಇಲ್ಲದೆ ಹೋದರೆ ನಮ್ಮ ದೇಶದ ಜನರಿಗೆ ಅವರ ಸೌಲಭ್ಯ ಸಿಕ್ಕುವುದಿಲ್ಲ, ನಾವು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡತಕ್ಕ ಹಣ ಪ್ರಯೋಜನವಾಗದೇ ಹೋಗುತ್ತದೆ. ಈಗ ಮಾಗಡಿಯಲ್ಲಿ ಎರಡು ಕಡೆ ಆಸ್ಪತ್ರೆಯನ್ನು ಕೊಟ್ಟಿದ್ದಾರೆ, ತಾವರೆಕೆರೆ ಮತ್ತು ಸಜ್ಜೆಘಟ್ಟ ಅಲ್ಲಿ ಕಟ್ಟಡ ಆಗಿಲ್ಲ, ಅದಕ್ಕೆ 15 ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಕೂಡ ಮಾಡಿಸಿದ್ದೇನೆ, ಈ ಒಂದು ಕಾರ್ಯವನ್ನು ಮಾಡಿಸಿಕೊಡಬೇಕು.

ಎಲ್ಲಕ್ಕಿಂತಲೂ ಮಿಗಿಲಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಶಾಲೆಗಳ ಭದ್ರತೆಗೆ ನಿಗಾ ಕೊಟ್ಟು, ಅವಕ್ಕೆ ಹೆಚ್ಚಿನ ಗ್ರಾಂಟ್ ಕೊಡಬೇಕು ಮತ್ತು ಆ ಬಗ್ಗೆ ಮೊದಲಿನ ಪದ್ಧತಿಯನ್ನೇ ಜಾರಿಗೆ ತರಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ಸರ್ಕಾರದವರು ಮೇಲಿಂದ ಮೇಲೆ ಮಿತವ್ಯಯ ಎಂದು ಹೇಳುತ್ತಾ ಬಂದಿದ್ದಾರೆ. ಇವತ್ತಿನ ದಿವಸ 3 ಕೋಟಿ 78 ಲಕ್ಷ ರೂಪಾಯಿಗಳಷ್ಟು ಹೆಚ್ಚುವರಿ ಬೇಡಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ನನಗಾದರೂ ಅನಿಸುತ್ತದೆ, ಈ ಹೆಚ್ಚುವರಿ ಬೇಡಿಕೆಯಲ್ಲಿ ಖೋತಾ ಮಾಡತಕ್ಕ ಸಿಬ್ಬಂದಿ ಎಷ್ಟೋ ಇದೆ. ಮೂರು ವರ್ಷದ ಹಿಂದೆ ಆರ್ಥಿಕ ಮಂತ್ರಿಗಳು ಈ ಸಭೆಗೆ ಆಶ್ವಾಸನೆ ಕೊಡಿಸಿದರು, ನಾವು ಎಲ್ಲಾ ಡಿಪಾರ್ಟ್‌ಮೆಂಟುಗಳಲ್ಲೂ ಸಿಬ್ಬಂದಿಯನ್ನು ಖೋತಾ ಮಾಡುತ್ತೇವೆ ಎಂದು, ಆದರೆ ಆ ರೀತಿ ಮಾಡಿದಂತೆ ಕಾಣುವುದಿಲ್ಲ.

[Mr. Deputy Speaker in the Chair]

ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್, ಫಾರೆಸ್ಟ್ ಮುಂತಾದ ಇಲಾಖೆಗಳಲ್ಲಿ ಹೆಚ್ಚಿನದಾದ ಸಿಬ್ಬಂದಿಯನ್ನು ನೇಮಕ ಮಾಡಿರುವುದು ಇದರಲ್ಲಿ ಕಾಣುತ್ತಾ ಇದೆ. ಎಕ್ಸೈಜ್‌ನಲ್ಲಿರತಕ್ಕ ಹೆಚ್ಚುವರಿ ಸಿಬ್ಬಂದಿ ನೋಡಿದರೆ ಅದನ್ನು ತಾಲ್ಲೂಕು ಸಿಬ್ಬಂದಿ ಮೂಲಕ ಸರಿಪಡಿಸುವುದಕ್ಕೆ ಅವಕಾಶವಿದೆ. ಎಕ್ಸೈಜ್ ಇನ್‌ಸ್ಪೆಕ್ಟರ್‌ಗಳು, ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರುಗಳು, ಅಸಿಸ್ಟೆಂಟ್ ಎಕ್ಸೈಜ್ ಇನ್‌ಸ್ಪೆಕ್ಟರುಗಳು, ಇವರ ಕೆಲಸ ಏನು ಎಂದರೆ, ಗಿಡಗಳನ್ನು ಎಣಿಸಿ ಅವಕ್ಕೆ ನಂಬರುಗಳನ್ನು ಹಾಕಿಸುವುದು ಅಂತ ಇದೆ. ಈಗಾಗಲೇ ಪಾಸ್ ಮಾಡಿರತಕ್ಕ ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ತಹಸೀಲ್ದಾರರಿಗೆ ಯಾವುದೇ ಹೆಚ್ಚಿನ ಕೆಲಸ ಇರುವುದಿಲ್ಲವಾದದ್ದರಿಂದ ತಾಲ್ಲೂಕು ಆಫೀಸಿನಲ್ಲಿರತಕ್ಕ ಸಿಬ್ಬಂದಿಗೆ ಈ ಕೆಲಸವನ್ನು ಕೊಟ್ಟು ತಹಶೀಲ್ದಾರರ ಮೇಲ್ವಿಚಾರಣೆಯಲ್ಲಿ ನಡೆಸುವುದಾದರೆ ಅಸಿಸ್ಟೆಂಟ್ ಎಕ್ಸೈಜ್ ಇನ್‌ಸ್ಪೆಕ್ಟರು, ಇನ್‌ಸ್ಪೆಕ್ಟರು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರು ಇವರುಗಳನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ ರೀತಿ ಮಾಡಬೇಕೆಂದು ಇವತ್ತಿನ ದಿವಸ ಹೇಳುತ್ತೇನೆ. ಧಾರವಾಡಕ್ಕೆ ಒಬ್ಬರು ಅಡೀಷನಲ್ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸರನ್ನು ನೇಮಕ ಮಾಡಿದ್ದೀರಿ, ಈಗಿರತಕ್ಕವರಿಗೇ ಸಾಕಾದಷ್ಟು ಕೆಲಸ ಇಲ್ಲ, ತಮಗೆ ಗೊತ್ತಿದ್ದ ಹಾಗೆ ಎಲ್ಲಾ ಕೆಲಸಗಳನ್ನೂ ಕೋರ್ಟಿನ ಮುಖಾಂತರ ಪರಿಹಾರ ಮಾಡುತ್ತಾ ಇರುವುದರಿಂದ ಈ ಒಂದು ಹುದ್ದೆಯನ್ನು ತೆಗೆದರೆ ಇದರಿಂದಲೂ ಹಣ ಉಳಿತಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಈ ವಿಜಿಲೆನ್ಸ್ ಕಮಿಷನ್ ಬಗ್ಗೆ ಹೇಳುವುದಾದರೆ ಇದು ತನ್ನ ಕಾರ್ಯವನ್ನು ಚುರುಕಾಗಿ ಮಾಡುತ್ತಿಲ್ಲ. ನಾನು ಪತ್ರಿಕೆಗಳಲ್ಲಿ ಮೇಲಿಂದ ಮೇಲೆ ಓದುತ್ತಿರುವುದರಲ್ಲಿ ಈ ಕಮಿಷನ್, ಸಾಕಷ್ಟು ಜನರು ಅಲ್ಲಿದ್ದರೂ ವೇಳೆಯಲ್ಲಿ ವಿಚಾರಣೆಗಳನ್ನು ಮುಗಿಸುತ್ತಿಲ್ಲ. ಇದು ಸ್ಥಗಿತವಾಗಿದೆಯೇನೋ ಅನ್ನುವಂತೆ ಭಾಸವಾಗುತ್ತದೆ. ಇವರಿಗೆ ಪ್ಲ್ಯಾನ್ ಬೇಕು ಎಂಬುದೇನೋ ಒಪ್ಪತಕ್ಕ ವಿಷಯವೇ. ಆದರೆ ಇದು ಯಾವುದಾದರೊಂದು ಕಡೆಯಲ್ಲಿ ಒಂದು ಅಲಿಗೇಷನ್ ಬಂದಾಗ ಅದರ ವಿಚಾರಣೆಗೆ ಹೋದರೆ ಅದನ್ನು ಆಗಲೇ ಸಾಧ್ಯವಾದಮಟ್ಟಿಗೂ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಡಿಮ್ಯಾಂಡ್ ನಂ 13ರ ರಲ್ಲಿ ಪೋಲೀಸ್ ಸಿಬ್ಬಂದಿಗಾಗಿ ಹೆಚ್ಚಿನ ಗ್ರ್ಯಾಂಟನ್ನು ಕೇಳಿದ್ದಾರೆ. ಆದರೆ ಈ ಇಲಾಖೆಯವರ ಅತ್ಯಾಚಾರ ಆ ಮಧುಗಿರಿ ಒಂದರಲ್ಲಿ ಮಾತ್ರ ಬಯಲಿಗೆ ಬಂದು ಒಬ್ಬ ಮಂತ್ರಿಗಳು ಈಗಾಗಲೇ ಮನೆಗೆ ಹೋಗುವಂತಾಯಿತು. ಆದರೆ ನಮ್ಮ ಆ ಧಾರವಾಡ ಜಿಲ್ಲೆಯಲ್ಲಿ ಪೋಲೀಸ್ ಖಾತೆ ಇದೆಯೋ ಅಥವಾ ಇಲ್ಲವೋ ಒಂದೂ ಗೊತ್ತಾಗುವುದಿಲ್ಲ. ಅಂಥ ಪರಿಸ್ಥಿತಿ ಅಲ್ಲಿ ಉಂಟಾಗಿದೆ. ಈ ದಿವಸ ಅಲ್ಲಲ್ಲೇ ವಿಶೇಷ ರೀತಿಯಲ್ಲಿ ಮುಸುಕಿನ ಜೋಳ ಅಥವಾ ಆ ಹೈಬ್ರಿಡ್ ಜೋಳವನ್ನು ಹೆಚ್ಚಾಗಿ ಬೆಳೆದರೆ ಅದನ್ನು ಸೂಪರ್‌ವೈಜ್ ಮಾಡುವುದಕ್ಕೆ ಇರತಕ್ಕ ಸಿಬ್ಬಂದಿಯಲ್ಲೇ ಅವರೀಗ ಮ್ಯಾನೇಜ್ ಮಾಡುತ್ತಿಲ್ಲವೇ? ಆದರೆ ಇಲ್ಲೇನು ಅಂಥ ವಿಶೇಷ ಪರಿಸ್ಥಿತಿ? ಈ ಇಲಾಖೆಯಲ್ಲಿ ಎಷ್ಟು ಜನ ದೊಡ್ಡ ಅಧಿಕಾರಿಗಳಿದ್ದರೂ ಅಲ್ಲಿ ಆ ಕಾನ್‌ಸ್ಟೇಬಲ್‌ಗಳಿಂದ ಜನರಿಗೆ ಆಗುತ್ತಿರುವ ಕಿರುಕುಳವನ್ನು ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಜನರು ಇನ್ನು ಆ ಧಾರವಾಡ ಜಿಲ್ಲೆಯಲ್ಲಿ ಇರಬಾರದೆಂಬುವಷ್ಟು ಜಿಗುಪ್ಸೆ ಉಂಟಾಗಿದೆ. ಆದರೆ ಅಲ್ಲಿರತಕ್ಕ ಎಸ್.ಸಿ. ಒಬ್ಬರು ಮೀಸೆಯನ್ನು ಮಾತ್ರ ಬಹಳ ದೊಡ್ಡದಾಗಿ ಬೆಳೆಸಿದ್ದಾರೆ. ಅವರ ಹಾಗೆ ಅಲ್ಲಿ ಇನ್ನೊಬ್ಬ ಕಾನ್‌ಸ್ಟೇಬಲ್ ಸಹಾ ಅದೇ ರೀತಿ ದೊಡ್ಡದಾಗಿ ಮೀಸೆಯನ್ನು ಬೆಳೆಸಿದ್ದಾನೆ, ಅದೇಕೆ ಹಾಗೆ ಬೆಳೆಸಿದ್ದೀಯೇ ಎಂದು ಅವನನ್ನು ಕೇಳಿದರೆ ಅವನು ಹಾಗೆ ಮೀಸೆಯನ್ನು ಬೆಳೆಸದಿದ್ದರೆ ನಮ್ಮ ಸಾಹೇಬರು ನನ್ನನ್ನು ಬೇರಾವ ಕಡೆಗಾದರೂ ವರ್ಗಾಯಿಸುತ್ತಾರೆಂಬ ಭಯದಿಂದ ಬೆಳೆಸಿದ್ದೇನೆ, ಇದಕ್ಕೆ ಒಂದೆರಡು ಇನ್‌ಕ್ರಿಮೆಂಟುಗಳನ್ನೂ ಕೂಡ ಕೊಡುತ್ತಾರೆಂದು ಹೇಳಿದನು. ಇಷ್ಟೆ, ಅವರು ಮಾಡತಕ್ಕ ಅವರ ಕರ್ತವ್ಯ ಪಾಲನೆ ಇದು ಹಾಗೇ ಇನ್ನು ಕೆಲವು ದಿನ ಮುಂದುವರಿದಲ್ಲಿ ಆ ಮಧುಗಿರಿಯಲ್ಲಾದ ಪ್ರಸಂಗಗಳು ಅಲ್ಲಿ ಅನೇಕ ಕಡೆ ನಡೆಯುತ್ತವೆ. ಆದರೆ ಅಷ್ಟಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತಿದ್ದೇನೆ.

ಇನ್ನು ಮುಜ್ರಾಯಿ ಇಲಾಖೆಯ ವಿಚಾರಕ್ಕೆ ಬಂದರೆ, ಅಲ್ಲಿರತಕ್ಕ ಅಂದರೆ ಅನೇಕ ಮಠ ಮಂದಿರ ಗುಡಿಗೊಂಡಾರಗಳಿಗೆ ಸೇರಿಸಿರತಕ್ಕ ಭೂಮಿಯೇನಿದೆ ಅದನ್ನು ಮಾರಾಟ ಮಾಡಿ ಅದರಿಂದ ಬರತಕ್ಕ ಹಣವನ್ನು ಸರ್ಕಾರದಲ್ಲಿಟ್ಟು ಅವುಗಳ ದಿನವಹಿ ಕರ್ತವ್ಯಗಳನ್ನು ನಡೆಸಬೇಕೆಂದು ಮುಂಬೇ ಆಕ್ಟಿನಲ್ಲಿತ್ತು. ಆದರೆ ಇಲ್ಲಿರತಕ್ಕ ಆಕ್ಟ್‌ಗಳ ರೀತಿಯೇ ಒಂದು ವಿಧ. ಇಲ್ಲಿಯವರೆಗೂ ಈ ವಿಚಾರದಲ್ಲಿ ಒಂದು ಯೂನಿಫಾರಂ ಕೋಡನ್ನು ತರುವುದಕ್ಕಾಗಿಲ್ಲ. ಹಿಂದೆ ಒಂದು ಧಾರ್ಮಿಕ ಸಂಸ್ಥೆಗೆ ಸಂಬಂಧಪಟ್ಟ ಮಸೂದೆ ಬಂದಿತ್ತು. ಆದರೆ ಇತ್ತೀಚೆಗೆ ಅದೇನಾಯಿತೋ ತಿಳಿಯಲಿಲ್ಲ ಅದು ಮೂಲೆಯಲ್ಲಿ ತಣ್ಣಗೆ ಕುಳಿತಿದೆ. ಆ ಆಸ್ತಿಗಳಿಂದ ಬರತಕ್ಕ ಉತ್ಪನ್ನವನ್ನು ಯಾರು ಯಾರೊ,

(ಶ್ರೀ ಸಿದ್ದಯ್ಯ ಕಾಶೀಮಠ)

ಈ ದಿವಸ ಅನುಭವಿಸುತ್ತಿದ್ದಾರೆ. ಅದನ್ನು ಒಂದು ಸರಿಯಾದ ರೀತಿಯಲ್ಲಿ ಸದ್ವಿನಿಯೋಗವಾಗುವುದಕ್ಕೆ ಅವಕಾಶ ಮಾಡಲು ಸರ್ಕಾರದವರು ಕೂಡಲೆ ಒಂದು ಯೂನಿಫಾರಂ ಶಾಸನವನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಇನ್ನು ಈ 18ನೆಯ ಡಿಮ್ಯಾಂಡಿನಲ್ಲಿ ಮಹಾತ್ಮಗಾಂಧಿ ಮೆಮೋರಿಯಲ್ ಟಿ. ಟಿ. ಸ್ಯಾನಿಟೋರಿಯಂಗೆ 80,000 ರೂಪಾಯಿಗಳನ್ನು ಕೇಳಿದ್ದಾರೆ. ಅಲ್ಲಿಗೆ ಬರತಕ್ಕ ಬಡ ರೋಗಿಗಳಿಗೆ ಅನುಕೂಲಮಾಡಬೇಕೆಂಬ ಉದ್ದೇಶವಿದೆ. ಇದರ ಬಗ್ಗೆ ಸರ್ಕಾರದವರು ಹೆಚ್ಚಿನ ನಿಗಾ ವಹಿಸಿ ಅಲ್ಲಿಗೆ ಹೆಚ್ಚಿನ ಔಷಧಿಗಳನ್ನು ಸರಬರಾಯಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು 38 ನೆಯ ಡಿಮ್ಯಾಂಡಿನಲ್ಲಿ ಕೆಡ್ಡಾ ಆಪರೇಷನ್‌ಸಗಾಗಿ ಹಣವನ್ನು ಕೇಳಿದ್ದಾರೆ. ಈ ಸಭೆಯ ಸದಸ್ಯರೂ ಕೂಡ ಅದಕ್ಕೆ 500 ರೂಪಾಯಿಗಳನ್ನು ಕೊಟ್ಟು ಟಿಕೆಟ್ ಕೊಂಡು ಕೊಳ್ಳಬೇಕೆಂದು ಹೇಳಿದ್ದಾರೆ. ಮಂತ್ರಿಗಳೂ ಕೂಡ ಅಲ್ಲಿಗೆ ಹೋಗಬೇಕಾಗಿದ್ದರೆ ಅದಕ್ಕೆ ಟಿಕೆಟ್ಟನ್ನು ಕೊಳ್ಳಲೇಬೇಕು. ಇದು ಸರಿಯಾದ್ದಲ್ಲ. ಇಷ್ಟೆಲ್ಲಾ ಹಣವನ್ನು ಅಲ್ಲಿ ಇವರು ಸಿಬ್ಬಂಧಿ ನೇಮಕಕ್ಕೆ ಖರ್ಚುಮಾಡುತ್ತಿದ್ದಾರೆ. ಹಾಗಿರುವಾಗ ಆ ಸ್ಥಳಕ್ಕೆ ಹೋಗುವುದಕ್ಕೆ ಈ ಮನೆಯ ಎಲ್ಲ ಸದಸ್ಯರಿಗೂ ಉಚಿತವಾದ ಪ್ರವೇಶಕ್ಕೆ ಅವಕಾಶವಿರಬೇಕೆಂದು ನಾನು ಹೇಳುತ್ತೇನೆ.

ಇನ್ನು ರೈತರಿಗೆ ಕೊಡತಕ್ಕ ಸಾಲದ ವಿಚಾರಕ್ಕೆ ಬಂದರೆ, ಕೇಂದ್ರ ಸರ್ಕಾರದವರು ಈ ವ್ಯವಸಾಯೋಪಕರಣಗಳನ್ನು ಕೊಳ್ಳಲು 75 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಅದಕ್ಕೆ ರಾಜ್ಯ ಸರ್ಕಾರ 75 ಲಕ್ಷ ಹಾಕಿ ಅದನ್ನು ಕೊಳ್ಳಬೇಕಾಗಿದೆ. ಆ ಹಣದಲ್ಲಿ ರೈತರಿಗೆ ಟ್ರಾಕ್ಟರನ್ನು ಕೊಳ್ಳಲು ಸಾಲ ಕೊಟ್ಟರೆ ಅದಕ್ಕೆ ಒಂಭತ್ತು ಮುಕ್ಕಾಲು ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಿದ್ದಾರೆ. ರೈತರಿಗೆ ಈ ಬಗ್ಗೆ ಸಾಕಷ್ಟು ಪ್ರಚಾರ ನಡೆದಿಲ್ಲ. ಅಷ್ಟು ದುಬಾರಿ ಬಡ್ಡಿ ಕೊಟ್ಟು ಟ್ರಾಕ್ಟರನ್ನು ಕೊಳ್ಳಲು ಅವರಿಗೆ ಚೈತನ್ಯವಿಲ್ಲ. ಈ ಕಾರ್ಯವನ್ನು ನಡೆಸುವುದಕ್ಕೆ ಆ ಅಗ್ರೋ ಇಂಡಸ್ಟ್ರಿಯಲ್ ಕಾರ್ಪೋರೇಷನ್ನಿಗೂ ಕೂಡ ಸಾಧ್ಯವಿಲ್ಲ.

ಇನ್ನು ಬೆಂಗಳೂರಿನಲ್ಲಿ ಹಾಲಿನ ಸರಬರಾಯಿ ಬಗ್ಗೆ ಡೈರಿಫಾರಂಗೆ ಹಣವನ್ನು ಒದಗಿಸಿರುವಂತೆ ಇನ್ನುಳಿದ ಎಲ್ಲಾ ಜಿಲ್ಲಾ ಕಸಬೆಗಳಲ್ಲಿಯೂ ಮಿಲ್ಕ್‌ಪ್ರೊಡ್ಯೂಸಿಂಗ್ ಡೈರಿಫಾರಂಗಳ ಸೊಸೈಟಿಯನ್ನು ತೆರೆಯಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಧಾರವಾಡದಲ್ಲಿರತಕ್ಕ ಕಾಟನ್ ಸೀಡ್ಸ್ ಸೊಸೈಟಿಗೆ ಸೀಡ್ಸನ್ನು ಕೊಳ್ಳಲು ಮೊದಲು 44 ಲಕ್ಷಕ್ಕೆ ಅಂದಾಜಾಗಿದ್ದ ಸೀಡ್ಸನ್ನು ಸಕಾಲದಲ್ಲಿ ಕೊಳ್ಳದೆ ಇದ್ದುದರಿಂದ ಅದರ ಬೆಲೆ ಈಗ 65 ಲಕ್ಷಕ್ಕೆ ಏರಿದೆಯೆಂದು ಹೇಳಿದ್ದಾರೆ. ಹೀಗೆ ಅಲ್ಲಿ ವ್ಯತ್ಯಾಸವಾಗಿ ಹೆಚ್ಚಾಗಿರತಕ್ಕ 20ಲಕ್ಷಕ್ಕೆ ಯಾರು ಜವಾಬ್ದಾರರು? ಅದಕ್ಕೆ ಆಗಿದ್ದ ಶ್ರೀ ಕೆ.ಎಚ್. ಪಾಟೀಲರು ಕಾರಣವೋ ಅಥವಾ ಅದಕ್ಕೆ ಸರ್ಕಾರದವರು ಕಾರಣವೋ ಅದನ್ನು ತಿಳಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಐಸ್. ಸೆಟ್ಟರ್ (ಹುಬ್ಬಳ್ಳಿ).—ಸ್ವಾಮಿ ಅಧ್ಯಕ್ಷರೇ, ನಾನು ಈ ದಿವಸ ಇಲ್ಲಿ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ರಾಜಕೀಯ ಸಂತ್ರಸ್ತರಿಗೆ ಕೊಡತಕ್ಕ ಯಾವ ಒಂದು ಪರಿಹಾರ ಆಗಲೀ ಅಥವಾ ಒಂದು ಭತ್ತೆಯನ್ನು ಕೊಡಬೇಕೆಂದು ಏನು ಇಲ್ಲಿ ಹೇಳಿದ್ದಾರೆ ಅದು ಅತಿ ವಿಚಿತ್ರವಾದುದಾಗಿದೆ. ಯಾವಾಗ ಇವರು ಇದಕ್ಕೆ 2 ಲಕ್ಷ ರೂಪಾಯಿಗಳನ್ನು ಬೇಡಿದ್ದಾರೋ ಆಗಲೇ ಇಷ್ಟು ಹಣವನ್ನು ಖರ್ಚು ಮಾಡತಕ್ಕ ವಿಚಾರದಲ್ಲಿ ಅನುಸರಿಸಬೇಕಾದ ತತ್ವಗಳೇನು ಎಂಬುದನ್ನು ನಾವು ಮೊದಲು ನೋಡಬೇಕು. ಯಾವ ಮನುಷ್ಯನಿಗೆ ರಾಜಕೀಯ ಸಂತ್ರಸ್ತ ಎನ್ನಬೇಕು ಅವನ ಹಿಂದಿನ ಪರಿಸ್ಥಿತಿಯೇನಿತ್ತು ಈ ದಿವಸ ಅವನ ಪರಿಸ್ಥಿತಿಯೇನಾಗಿದೆ ಎಂಬುದನ್ನು ನಿರ್ಧಾರಮಾಡಬೇಕು. ಈಗಾಗಲೇ ಈ ಬಗ್ಗೆ ಸಾವಿರಾರು ಅರ್ಜಿಗಳು ಬಂದಿವೆ ಎಂದು ಹೇಳಲಾಗುತ್ತಿದೆ. ಸರ್ಕಾರದವರು ಯಾವಾಗ ಇದನ್ನು ಕೊಡಬೇಕೆಂದು ತೀರ್ಮಾನ ಮಾಡಿದರು ? ಅದನ್ನು ನಾವೀಗ ನೋಡಬೇಕಾಗಿದೆ. ಈ ಪೂರಕವನ್ನು ಇದರಲ್ಲಿ ಸೇರಿಸಬಾರದಾಗಿತ್ತು. ಇದಕ್ಕೆ ಮೊದಲು ಸವಿಸ್ತಾರವಾದ ಮಾಹಿತಿಗಳನ್ನು ಒದಗಿಸಿ ಅನಂತರ ನೇಮಗಳನ್ನು ಅಳವಡಿಸಿ ಇದನ್ನು ಅನಂತರ ತಂದಿದ್ದರೆ ಚೆನ್ನಾಗಿತ್ತು.

ಇನ್ನು ಮುಜ್ರಾಯಿ ಇಲಾಖೆಯ ಆಡಳಿತಕ್ಕೊಳಪಟ್ಟ ಹಾಗೆ ಬೆಂಗಳೂರು ಜಿಲ್ಲೆಯಲ್ಲಿ ಕೆಲವು ಭೂಮಿಗಳು ಮಾರಾಟವಾಗಿವೆ. ಅದರ ಸಲುವಾಗಿ ಇಲ್ಲಿ ಒಂದು ಡಿಮ್ಯಾಂಡನ್ನು ತಂದಿದ್ದಾರೆ. ಆದರೆ ಇದು ಇಡೀ ರಾಜ್ಯಕ್ಕೆಲ್ಲಾ ಅನ್ವಯಿಸುವುದಿಲ್ಲ. ಇದನ್ನು ಇಲ್ಲಿ ಒಂದು ಪ್ರಾಯೋಗಿಕವಾಗಿ

ಮಾಡುವುದಕ್ಕೆ ಹೊರಟಿರತಕ್ಕದ್ದು ಇನ್ನೂ ವಿಚಿತ್ರವಾಗಿದೆ. ಸರಕಾರಕ್ಕೆ ಕೂಡ ಧೈರ್ಯವಿಲ್ಲ. ಆದರೆ ಯಾವ ದೇವಸ್ಥಾನಗಳಲ್ಲಿ ಲಾಭವಾಗುತ್ತ ಇದೆಯೋ ಅದನ್ನು ನೋಡಬೇಕು ಮತ್ತು ಯಾವ ದೇವಸ್ಥಾನಗಳಲ್ಲಿ ಲುಕ್ಸಾನು ಆಗುತ್ತಿದೆಯೋ ಅದನ್ನೂ ನೋಡಬೇಕು. ಇದನ್ನು ನೋಡಿ ಸರಿಯಾದ ಕೆಲಸಗಳನ್ನು ಮಾಡುವುದಕ್ಕೆ ಸರಕಾರಕ್ಕೆ ಆಗಲಿಲ್ಲ ಎಂದು ಧೈರ್ಯವಾಗಿ ಹೇಳಲಿಕ್ಕೆ ಆಗಲಿಲ್ಲ. ಇವೊತ್ತು ದೇವಸ್ಥಾನದ ಜಮೀನುಗಳು ಇದ್ದರೆ ಅಲ್ಲಿ ಎಷ್ಟು ಉತ್ಪನ್ನಗಳು ಬರಬಹುದು ಮತ್ತು ಇಲ್ಲಿಯವರೆಗೆ ಏಕೆ ಅಲ್ಲಿ ಉತ್ಪಾದನೆಯಾಗಲಿಲ್ಲ ಎನ್ನುವುದನ್ನು ಸರಕಾರ ನೋಡಿ ಹೇಳಲಿಕ್ಕೆ ಆಗಲಿಲ್ಲ ಎನ್ನುವ ಮಾತು ಇದರಿಂದ ಇಲ್ಲಿ ಸ್ಪಷ್ಟವಾಗುತ್ತಾ ಇದೆ. ದೇವಸ್ಥಾನಗಳಲ್ಲಿ ಸೆಕ್ಯೂರಿಟಿಗಾಗಿ ಕೊಟ್ಟಿರುವ ಭೂಮಿಗಳನ್ನು ಮಾರಿ ಅದರಿಂದ ಬರುವ ಉತ್ಪನ್ನಗಳನ್ನು ಬೇರೆ ಕಡೆಗಳಲ್ಲಿ ಇನ್‌ವೆಸ್ಟ್ ಮಾಡುವಂತೆ ಮಾಡಬೇಕೆಂದು ಇದರಲ್ಲಿ ಹೇಳುತ್ತಿದ್ದಾರೆ ಮತ್ತು ಎಷ್ಟೋ ಜಮೀನುಗಳು ಕಾನೂನು ಪ್ರಕಾರ ನೋಡುವಾಗ ಸರಿಯಾಗಿರುವುದಿಲ್ಲ. ಎಷ್ಟು ಎಕರೆಗಳಷ್ಟು ಜಮೀನುಗಳು ದೇವಸ್ಥಾನಗಳಲ್ಲಿವೆ ಇದನ್ನು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವೇ ಎನ್ನುವ ಒಂದು ಸಂಗತಿಯನ್ನೂ ಇದರಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಆಯಾ ಪ್ರದೇಶಗಳಲ್ಲಿರುವ ಚಾರಿಟಿ ಕಮಿಷನರುಗಳಿಗೆ ಸೂಚನೆ ಕೊಡಬೇಕೆಂದೂ ಇದೆ. ಇದರಲ್ಲಿರುವ ಭೂಮಿಗಳಲ್ಲಿ ಉತ್ಪತ್ತಿ ಬರುತ್ತಿದೆಯೇ ಇಲ್ಲವೇ ಉತ್ಪನ್ನರಹಿತವಾಗಿರುವ ಭೂಮಿಗಳಿವೆಯೋ ಎನ್ನುವುದನ್ನು ಸರಿಯಾಗಿ ವಿಚಾರ ಮಾಡಬೇಕೆಂದೂ ಇದೆ.

3–30 P.M.

[Mr. Speaker in the chair]

ಮೈಸೂರು ಲ್ಯಾಂಡ್ ರಿಫಾರಂಸ್ ಆಕ್ಟ್ ಪ್ರಕಾರ ಮೂವತ್ತು ಅಡಿಷನಲ್ ಟ್ರಿಬ್ಯೂನಲ್‌ಗಳನ್ನು ಮಾಡಬೇಕಾಗಿದೆ ಮತ್ತು ಹಿಂದೆ ಇದ್ದ ಮುನ್ಸೀಫ್ ಕೋರ್ಟುಗಳಲ್ಲಿ ಸುಮಾರು ಐದು ಸಾವಿರಕ್ಕೆ ಮೇಲ್ಪಟ್ಟು ಕೇಸುಗಳು ತೀರ್ಮಾನವಾಗದೇ ಇರುವುದರಿಂದಾಗಿ ಇಂತಹ ಟ್ರಿಬ್ಯೂನಲ್‌ಗಳನ್ನು ಮಾಡಬೇಕಾಗಿ ಬಂದಿದೆ ಎಂದೂ ಇದರಲ್ಲಿ ಹೇಳಿದ್ದಾರೆ. ಇಂತಹ ಅಡಿಷನಲ್ ಟ್ರಿಬ್ಯೂನಲ್‌ಗಳನ್ನು ಮಾಡುವುದಕ್ಕೆ ಮುಂಚೆ ಹೈ ಕೋರ್ಟಿನವರೊಡನೆ ಸ್ವಲ್ಪ ವಿಚಾರ ಮಾಡಬಹುದಿತ್ತು. ಏಕೆಂದರೆ, ಈಗ ಟ್ರಿಬ್ಯೂನಲ್‌ಗಳನ್ನು ಮಾಡುವುದು ಹೇಗಾಗಿದೆ ಎಂದರೆ, ನಮ್ಮ ಭಾಗದಲ್ಲಿ ಹುಬ್ಬಳ್ಳಿ, ಕುಂದಗೋಳ ಹಾಗೂ ಧಾರವಾಡ ಇವನ್ನು ಸೇರಿಸಿ ಒಂದು ಟ್ರಿಬ್ಯೂನಲ್ ಧಾರವಾಡದಲ್ಲಿರಬೇಕೆಂದು ಮಾಡಲಾಗಿದೆ. ಇದರಿಂದ ಧಾರವಾಡಕ್ಕೆ ಹುಬ್ಬಳ್ಳಿ ಹಾಗೂ ಕುಂದಗೋಳ ಜನರು ಬರಲು ಬಹಳ ಅನಾನುಕೂಲಗಳಾಗುತ್ತಿವೆ. ಹಿಂದೆ ಇಲ್ಲಿದ್ದ ಸಿವಿಲ್ ಜಡ್ಜುಗಳೇ ಇದ್ದಾಗ ಇಂತಹ ಕೇಸುಗಳು ಬಹು ಚೆನ್ನಾಗಿ ತೀರ್ಮಾನವಾಗುತ್ತಿದ್ದವು. ಈಗ ಆ ರೀತಿ ಆಗುವುದಿಲ್ಲ ಎಂದು ಇಲ್ಲಿನ ಜನ ಹೇಳುತ್ತಿದ್ದಾರೆ. ಹಿಂದೆ ಈ ಭಾಗಗಳಲ್ಲಿ ಇದ್ದ ಸಿವಿಲ್ ಜಡ್ಜುಗಳಿಗೆ ಹೆಚ್ಚಾಗಿ ಕೆಲಸವೂ ಇರುತ್ತಿರಲಿಲ್ಲ ಮತ್ತು ಅವರು ಇಂತಹ ಕೇಸುಗಳನ್ನು ವಿಚಾರ ಮಾಡಿ ಸರಿಯಾದ ನ್ಯಾಯ ಕೂಡ ಜನಕ್ಕೆ ಸಿಗುತ್ತಿತ್ತು ಇದರಿಂದ ತೊಂದರೆಯೂ ಆಗಿರಲಿಲ್ಲ. ಹೀಗೆ ಮೂರು ಊರುಗಳನ್ನು ಸೇರಿಸಿ ಒಂದು ಟ್ರಿಬ್ಯೂನಲ್ ಮಾಡುವುದಕ್ಕೆ ಬದಲಾಗಿ ಮೊದಲು ಇದ್ದ ಸಿವಿಲ್ ಜಡ್ಜುಗಳ ಕೋರ್ಟಿನಲ್ಲೇ ಇವನ್ನೆಲ್ಲಾ ಪರಿಹರಿಸಬಹುದಾಗಿತ್ತು. ಕೇಸುಗಳೂ ಬೇಗನೆ ತೀರ್ಮಾನವಾಗಬಹುದಾಗಿತ್ತು. ಇದರ ಬಗ್ಗೆ ಈಚೆಗೆ ಸರಕಾರಕ್ಕೆ ಈ ಮೂರು ಊರುಗಳವರೂ ಎಂದರೆ ಕುಂದಗೋಳ, ಹುಬ್ಬಳ್ಳಿ ಮತ್ತು ಧಾರವಾಡದಲ್ಲಿರುವ ಬಾರ್‌ಕೌನ್ಸಿಲ್‌ಗಳ ಒಂದು ನಿಯೋಗ ಬಂದು ಇಂತಹ ಅನಾವಶ್ಯಕವಾದ ಟ್ರಿಬ್ಯೂನಲ್‌ಗಳನ್ನು ರದ್ದು ಮಾಡಿ ಮೊದಲಿಗೆ ಇದ್ದ ಮುನ್ಸಿಫ್ ಕೋರ್ಟುಗಳ ಸಿವಿಲ್ ಜಡ್ಜುಗಳಿಗೇ ಈ ಕೇಸುಗಳನ್ನು ವಹಿಸುವುದು ಸೂಕ್ತ ಎಂದು ಒತ್ತಾಯ ಮಾಡಿಯೂ ಬಂದಿದ್ದರು. ಸಿವಿಲ್ ಕೋರ್ಟುಗಳಲ್ಲಿರುವ ನ್ಯಾಯಾಧೀಶರು ಬಹಳ ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದರು. ಆದುದರಿಂದ ಇಲ್ಲಿ ಅನಾವಶ್ಯಕವಾಗಿ ಮೂವತ್ತು ಟ್ರಿಬ್ಯೂನಲ್‌ಗಳನ್ನು ಮಾಡುವುದಕ್ಕೆ ಬದಲಾಗಿ 24 ಟ್ರಿಬ್ಯೂನಲ್‌ಗಳನ್ನು ಮಾಡಿ ಇನ್ನೂ ಕಡಿಮೆ ಮಾಡಬಹುದಾಗಿತ್ತು. ಇದರ ಬಗ್ಗೆ ಸರಕಾರಕ್ಕೆ ನಾನು ತಕ್ಕ ಸೂಚನೆಗಳನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಪೋಲೀಸು ಇಲಾಖೆ ಬಗ್ಗೆ ಹೇಳುವಾಗ ಇಲ್ಲಿರುವ ಒಂದು ಬೇಡಿಕೆಯಂತೆ ಗುಲ್ಬರ್ಗಾದಲ್ಲಿ ಒಂದು ಹೊಸದಾಗಿರುವ ಪೋಲೀಸು ರೇಂಜನ್ನು ಮಾಡುವುದಕ್ಕೆ ಎಂದು ಇಲ್ಲಿ ಹಣ ಕೇಳಿದ್ದಾರೆ. ಇಂತಹ ಹೊಸ ರೇಂಜನ್ನು ಮಾಡುವುದಕ್ಕೆ ಬದಲಾಗಿ ಇನ್ನೂ ಹೆಚ್ಚು ಪೋಲೀಸು ಸ್ಟೇಷನ್ನುಗಳನ್ನು ಮಾಡಿದ್ದರೆ ಜನಕ್ಕೆ ಅನುಕೂಲವಾಗುತ್ತಿತ್ತು. ನಾನು ಕೆಲವು ಕಡೆ ಇರುವ ಪೋಲೀಸು ಸ್ಟೇಷನ್ನುಗಳನ್ನು ನೋಡಿದ್ದೇನೆ. ಒಂದೊಂದು ಸ್ಟೇಷನ್ನಿನಲ್ಲಿಯೂ ಸುಮಾರು 25–26 ಜನರಿರುತ್ತಾರೆ.

(ಶ್ರೀ ಎಸ್. ಎಸ್. ಶೆಟ್ಟರ್)

ಆದರೆ ಅವರು ಮಾಡುವ ಕೆಲಸಗಳನ್ನು ನೋಡಿದರೆ ದಿವಸದ ಪೂರ್ತಿ ಕೆಲಸ ಮಾಡಬೇಕಾಗಿರುವ ಪರಿಸ್ಥಿತಿಯಲ್ಲಿದ್ದಾರೆ. ಏಕೆಂದರೆ, ಅವರಲ್ಲಿ ಕೆಲವರು ರಾತ್ರಿ ಪಹರೆ ಕೆಲಸ ಇತ್ಯಾದಿ ಹಲವಾರು ಕೆಲಸಗಳನ್ನು ಮಾಡುತ್ತಲಿರುವುದರಿಂದ ಇವರಿಗೆ 24 ಗಂಟೆಗಳಾದರೂ ಸಾಲುತ್ತಿಲ್ಲ. ಇದರಿಂದ ಪೋಲೀಸರಲ್ಲಿ ದಕ್ಷತೆ ಹೇಗೆ ಬೆಳೆಯಲು ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚಿಸಬೇಕು. ಸರಕಾರದ ದಕ್ಷತೆ ಹೆಚ್ಚು ಮಾಡಲು ಹೊಸದಾಗಿ ರೇಂಜನ್ನು ಮಾಡುವುದು ಸರಿಯಲ್ಲ. ಅಲ್ಲದೆ ಕೆಲವು ಕಡೆ ಪೋಲೀಸು ಸ್ಟೇಷನ್ನುಗಳಲ್ಲಿ ಫೋನುಗಳೇ ಇರುವುದಿಲ್ಲ. ಇನ್ನು ಕೆಲವು ಕಡೆ ಅವರಿಗೆ ಸರಿಯಾದ ವಾಹನ ಎಂದರೆ ಜೀಪು ಇತ್ಯಾದಿಗಳೇ ಇಲ್ಲ. ಏನಾದರೂ ಒಮ್ಮೆ ಒಬ್ಬ ಕಳ್ಳನನ್ನು ಬೆನ್ನಟ್ಟಿ ಹಿಡಿಯಬೇಕೆಂದು ಹೋಗಬೇಕೆಂದರೆ ಅವರಿಗೆ ವಾಹನವೇ ಇರುವುದಿಲ್ಲ. ಇದನ್ನು ನಾವು ಕೆಲವು ಪೋಲೀಸು ಸ್ಟೇಷನ್ನುಗಳಲ್ಲಿ ನೋಡಿದ್ದೇವೆ. ಯಾವಾಗಲೂ ಇಂತಹ ಹೊಸ ಪೋಲೀಸು ರೇಂಜುಗಳನ್ನು ಮಾಡುವಾಗ ಇಲ್ಲಿ ದುಡ್ಡುಕಿದ್ದಾರೆಂದು ಕಾಣುತ್ತದೆ. ಬಡ್ಜೆಟ್ ಚರ್ಚೆಯಾಗುವಾಗ ಇಂತಹ ವಿಚಾರಗಳನ್ನು ಚರ್ಚೆಗೆ ತಂದು ಇದರ ಸಾಧಕಬಾಧಕಗಳನ್ನು ತಿಳಿದು ಇದನ್ನು ನಿಧಾನ ವಾಗಿ ಮಾಡಲು ಸಾಧ್ಯವಾಗುತ್ತಿತ್ತು. ಇಲ್ಲಿ ದುಡ್ಡು ಖರ್ಚು ಮಾಡಿದ್ದೇವೆ ಎಂದು ನಮ್ಮ ಒಪ್ಪಿಗೆ ಗಾಗಿ ತರುವುದನ್ನು ನೋಡಿದರೆ ಸರಕಾರ ಈ ಸಭೆಗೆ ಎಷ್ಟುಮಟ್ಟಿನ ಆದರ ವಿಶ್ವಾಸಗಳನ್ನು ಕೊಡು ತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ ಮತ್ತು ಈ ಮನೆಯ ಬಗ್ಗೆ ಸರಕಾರಕ್ಕೆ ಗೌರವವಿಲ್ಲ ಎನುವುದು ಇದರಿಂದ ಸ್ಪಷ್ಟವಾಗುತ್ತದೆ. ಯಾವುದೇ ನೀತಿ ಇರಲಿ ಅದನ್ನು ಸರಕಾರ ಈ ಮನೆಯ ಒಪ್ಪಿಗೆ ಪಡೆದು ಅನಂತರ ಅದನ್ನು ಕಾರ್ಯಗತವಾಗುವಂತೆ ಮಾಡಬೇಕು. ಆದರೆ ಇದರಲ್ಲಿ ಆ ರೀತಿ ಮಾಡಲಿಲ್ಲ ಎನ್ನುವುದು ಇದರಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಅಲ್ಲದೆ ಕೆಲವು ಕಡೆಗಳಲ್ಲಿ ಒಂದು ಕೋಟಿಯಷ್ಟು ಸಾಲವನ್ನು ಪಡೆದು ಇರುವ ಉದಾಹರಣೆಗಳೂ ಇವೆ. ಇದರಿಂದ ನಮ್ಮ ರಾಜ್ಯಕ್ಕೆ ಬೇಕಾಗುವ ಕಾಳನ್ನು ಪಡೆಯಬೇಕೆಂದು ಮಾಡುತ್ತಿರುವುದು ನೋಡಿದರೆ ಇಂತಹ ಬೇಡಿಕೆಗಳನ್ನು ಸರಕಾರ ತಂದು ಇದನ್ನು ಪೂರೈಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಇದರಲ್ಲಿ ಕೆಲವು ಸಣ್ಣ ಸಣ್ಣ ಬೇಡಿಕೆಗಳನ್ನು ತಂದು ಇಲ್ಲಿ ಒಪ್ಪಿಗೆ ಕೇಳುತ್ತಿರುವುದು ನೋಡಿ ಬಹಳ ವಿಷಾದವಾಗುತ್ತಿದೆ, ಇಂತಹ ಸರಕಾರದ ನೀತಿ ಸರಿಯಾಗಿದೆಯೇ ಎಂದು ನಾನು ಪ್ರಶ್ನಿಸಬೇಕಾಗಿದೆ. ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಾಳುಗಳನ್ನು ತಂದು ಸಂಪೂರ್ಣವಾಗಿ ಎಲ್ಲ ಕಡೆಗಳಿಗೂ ಹಂಚಬೇಕು ಎಂದು ಮಾಡುತ್ತಿದ್ದಾರೆ. ನಮ್ಮ ಕಡೆ ಇರುವ ಪಟ್ಟಣಗಳಲ್ಲಿ ಎಂದರೆ ಹುನಗುಂದ, ಧಾರವಾಡ ಹಾಗೂ ನವಲಗುಂದ ಪಟ್ಟಣಗಳಲ್ಲಿ ಹಾಗೂ ಬೇರೆ ಡಿಸ್ಟ್ರಿಕ್ಟ್‌ಗಳಲ್ಲಿ ಇದರ ಹಂಚಿಕೆಯನ್ನು ಮಾಡಬೇಕೆಂದು ಮಾಡಿದರೂ ಒಂದೊಂದು ಕಡೆ ಒಂದೊಂದು ರೀತಿಯಾಗಿ ಹಂಚುತ್ತಿರುತ್ತಾರೆ. ಅಲ್ಲದೆ ಬೆಳೆ ಎಲ್ಲಾಗುತ್ತದೋ ಅಲ್ಲೇ ಅದನ್ನು ಹಂಚುವ ಏರ್ಪಾಡು ಮಾಡುವುದಕ್ಕೆ ಬದಲಾಗಿ ಒಂದು ಕಡೆ ಬೆಳೆದ ಕಾಳುಗಳನ್ನು ಬೇರೆ ಒಂದು ಕಡೆಗೆ ತೆಗೆದು ಕೊಂಡು ಹೋಗಿ ಆ ಜಿಲ್ಲೆಗಳಲ್ಲಿ ಹಂಚಬೇಕೆಂದು ಮಾಡಿದರೆ ಅದರಿಂದ ಅವ್ಯವಸ್ಥೆಗಳಾಗುತ್ತವೆ. ಇದರಿಂದ ಸರಕಾರದ ನೀತಿ ಸರಿಯಾಗಿಲ್ಲ ಎಂದು ಹೇಳಬೇಕಾಗಿದೆ. ಇಂತಹ ಕೆಲಸಗಳನ್ನು ಸರಕಾರ ಮಾಡುವಾಗ ಒಂದು ನೀತಿಯ ಹಾಗೂ ತತ್ವದ ದೃಷ್ಟಿಯಿಂದ ಇವನ್ನು ಮಾಡುತ್ತಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇದನ್ನು ಸರಿಯಾಗಿ ಪುನರ್ವಿಮರ್ಶೆ ಮಾಡಬೇಕು. ಸರಕಾರ ಇಂತಹ ಕೆಲಸಗಳ ಬಗ್ಗೆ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಇಲ್ಲಿ ಪೂರಕವಾದ ಬೇಡಿಕೆ ಗಳನ್ನು ತರುವಾಗ ಸರಕಾರದವರು ಇಲ್ಲಿಯವರೆಗೆ ಮಾಡಿರುವ ಕಾರ್ಯ ಸಾಧನೆಯ ವಿಷಯವನ್ನು ಹೇಳಿ ಮತ್ತು ಮುಂದೆ ಆಗಬೇಕಾದ ಕೆಲಸಗಳನ್ನು ಸರಿಯಾಗಿ ಇದರಲ್ಲಿ ಸೇರಿಸಿ ಆ ನಂತರ ಸಭೆಯ ಒಪ್ಪಿಗೆಯನ್ನು ಪಡೆಯಲು ಇಲ್ಲಿ ತರುವುದು ಒಳ್ಳೆಯದು. ಇಂತಹ ಎಷ್ಟೋ ನಿದರ್ಶನಗಳು ನಮಗೆ ಕಂಡು ಬರುತ್ತಿರುವುದರಿಂದ ಇನ್ನು ಮುಂದಾದರೂ ಸರಿಯಾಗಿರುವ ಬೇಡಿಕೆಗಳನ್ನು ಇಲ್ಲಿ ತರಬೇಕು, ಈಗ ತಂದಿರುವ ಬೇಡಿಕೆಗಳು ಆರ್ಟಿಕಲ್ 205 ಕ್ಕೆ ವಿರೋಧವಾಗಿದೆ. ಇಂತಹುದರಲ್ಲಿ ಇದನ್ನು ಒಪ್ಪಬೇಕೆಂದು ತರುತ್ತಿದ್ದಾರೆ. ಇದು ಸರಿಯಲ್ಲ ಇನ್ನು ಮುಂದಾದರೂ ಈ ರೀತಿ ಮಾಡಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, ಧಾರವಾಡ ಡಿಸ್ಟ್ರಿಕ್ಟ್ ಆಯಿಲ್ ಸೀಡ್ಸ್ ಕೋ-ಆಪರೇಟೀವ್ ಸೊಸೈಟಿ ಮೇಲೆ ತಂದಿರತಕ್ಕ ಅಪಾದನೆಗಳ ಬಗ್ಗೆ ಭಾಷಣ ಮಾಡುತ್ತಾ 1951 ನೇ ಡಿಶಂಬರ್‌ನಲ್ಲಿ ಈ ಮನವಿಯನ್ನು ತಂದಿದ್ದ ಕಾಲದಲ್ಲಿ ಆಂದಿನ ಸಹಕಾರಿ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ನನ್ನ ಮೇಲೆ ಆರೋಪಣೆ ಮಾಡು ವುದಕ್ಕೆ ಇದ್ದ ಸಂಗತಿ ಇಷ್ಟೇ. ಇದರಲ್ಲಿ ಅತಿ ಹೆಚ್ಚು ಲಾಭವನ್ನು ಗಳಿಸಿದ್ದು ಕೆ. ಹೆಚ್. ಪಾಟೀಲರು

ಇದ್ದಾಗಲೇ. ಆದುದರಿಂದ ಇದನ್ನು ಹೇಗಾದರೂ ಮಾಡಿ ತಮ್ಮ ಸ್ವಾಧೀನ ತೆಗೆದುಕೊಳ್ಳಬೇಕು ಎನ್ನುವ ಲವಲವಿಕೆ ಮತ್ತು ಕುಚೋದ್ಯ ಭಾವನೆಯಿಂದ ತಾವೇ ಸರ್ಕಾರಿ ಅಧಿಕಾರಿಗಳನ್ನು ನೇಮಿಸಲು ಸೆಕ್ಷನ್ 54ರ ಪ್ರಕಾರ ತಮ್ಮ ಅಧಿಕಾರಕ್ಕೆ ತೆಗೆದುಕೊಂಡರು. ಇದರಿಂದ ಅಲ್ಲಿನ ಪ್ರತಿನಿಧಿಗಳು ನಿಮ್ಮವರಾಗಿಯೇ ಇದ್ದಾರೆ. ಈಗ ಇದಕ್ಕೆ ಹೆಚ್ಚು ಖರ್ಚಾಗುತ್ತಾ ಇದೆ. ಇಂತಹ ಸ್ಥಿತಿಗೆ ಒಳಗಾಗಿದೆ. ಈ ಹೆಚ್ಚು ಖರ್ಚಾಗುವಂಥಾದ್ದಕ್ಕೆ ಮಂತ್ರಿಗಳೇ ಕಾರಣರು. ಇದರಿಂದ ಏನು ಲೋಪವಾಗಿದೆ ಎನ್ನುವುದನ್ನು ಹೇಳುವುದಕ್ಕಾದರೂ ಜನತೆಗೆ ತೋರಿಸಿಕೊಡುವುದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಿ ವಿಚಾರಣೆ ಮಾಡಲಿ. ಎಲ್ಲೆಲ್ಲಿ ಏನಾಗಿದೆಯೋ ಅವೆಲ್ಲಾ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರಿಗೇ ಸೇರಿದುದು ಎಂದು ನಾನು ಹೇಳುತ್ತೇನೆ. ಅವರ ಕೈಯಲ್ಲಿ ಇದ್ದಂಥ ಜನ ಅಲ್ಲಿಯ ಪ್ರತಿನಿಧಿಗಳಾಗಿ ಹೋಗಿದ್ದಾರೆ. ಯಾರೇ ಆಗಲಿ ಇದರ ದುರ್ಗತಿಗೆ ಕಾರಣರಾದವರನ್ನು ಶ್ರೀಮಾನ್ ಕೆ. ಹೆಚ್. ಪಾಟೀಲರೇ ಆಗಲಿ, ಬೇಕಾದವರೇ ಆಗಲಿ ಇವಕ್ಕೆ ಒಂದು ಸಮಿತಿಯನ್ನು ನೇಮಿಸಿ, ವಿಚಾರಣೆ ಮಾಡಿ ಇದರ ಲೋಪದೋಷಗಳನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ.

Speaker's Ruling on a point of application of Article 205 of the constitution in relation to the Supplementary Demands.

MR. SPEAKER.—I will give the Ruling. Sri M. Nagappa raised a Point of Order. He referred to Article 205. At the very outset I want to make it clear that Article 205 is not one of the Articles which attracts the operation of Point of Order, Point of Order relates either to the violation or interpretation of the Rules of Procedure or such articles of the Constitution which refer to procedural matters. If the member refers to the rule, it will be clear that other articles do not come in under the category of the Point of Order. Therefore, there is no question of Point of Order arising.

Apart from that, the hon'ble member referred to a case reported in 1955 A. I. R. Nagpur at page 11. I want only to read the last concluding paragraph of that very judgement.

> "Thus in our view, demand made in the Budget does not contravene any express provision of the Constitution. The Appropriation Act 13 of 1954 is a valid one, and therefore, the petitioner is not entitled to the writ."

In the course of the judgement they have referred and made some observations. Therefore, it is mere *obiter dicta*. So far as this House is concerned; I may observe that it will not be right for the reason that Article 205 refers to three kinds of demands that can be included in the list of Supplementary Demands, *viz.*, that the amount provided for a particular service for the current financial year is found to be insufficient for the purposes of that year or when a need has arisen during the current financial year for supplementary or additional expenditure upon some new service not contemplated in the annual financial statement. Therefore, the ground is, as to whether this service or this nature of the Demand that is contained here is found in the Budget which has already been presented. The fallacy lies in thinking that there is a Demand which could have been included in